# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಸೋಮವಾರ, ಜೂನ್ 17, 2024

ಸಂಪುಟ : 51 ಸಂಚಿಕೆ : 34 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## 94ಕ್ಕೆ ಎಸ್ಸೆಸ್ : ಶುಭಾಶಯಗಳ ಮಹಾಪೂರ

ದಾವಣಗೆರೆ, ಜೂ.16- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರೂ, ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳೂ ಆದ ಡಾ. ಶಾಮನೂರು ಶಿವಶಂಕರಪ್ಪ ಅವರು ಇಂದು 93 ವರ್ಷಗಳನ್ನು ಪೂರೈಸಿ 94ನೇ ವಸಂತಕ್ಕೆ ಪಾದಾರ್ಪಣೆ ಮಾಡಿದ ಸಂದರ್ಭದಲ್ಲಿ ಶುಭಾಶಯಗಳ ಮಹಾಪೂರವೇ ಹರಿದು ಬಂತು.


ಎಸ್ಸೆಸ್ ಮಕ್ಕಳಾದ ಎಸ್.ಎಸ್. ಬಕ್ಕೇಶ್, ಎಸ್.ಎಸ್. ಗಣೇಶ್, ಶ್ರೀಮತಿ ಸುಧಾ ರಾಜೇಂದ್ರ ಪಾಟೀಲ್, ಶ್ರೀಮತಿ ಮಂಜುಳಾ ಶಿವಶಂಕರ್, ಶ್ರೀಮತಿ ಶೈಲಜಾ ಭಟ್ಟಾಚಾರ್ಯ ಮತ್ತು ಶ್ರೀಮತಿ ಮೀನಾ ಪಾಟೀಲ್ ಹಾಗೂ ಸೊಸೆಯಂದಿರಾದ ಶ್ರೀಮತಿ ಪ್ರೀತಿ ಬಕ್ಕೇಶ್, ಶ್ರೀಮತಿ ರೇಖಾ ಗಣೇಶ್, ಶ್ರೀಮತಿ ಡಾ.ಪ್ರಭಾ ಮಲ್ಲಿಕಾರ್ಜುನ್ ಮತ್ತು ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಕೇಕ್ ಕತ್ತರಿಸುವ ಮೂಲಕ ಶುಭ ಕೋರಿದರು. ವಿದೇಶ ಪ್ರವಾಸದಲ್ಲಿರುವ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ದೂರವಾಣಿ ಮೂಲಕ ತಮ್ಮ ತಂದೆಗೆ ಶುಭಾಶಯ ಹೇಳಿದರು.

ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ 'ಶಿವ - ಪಾರ್ವತಿ' ನಿವಾಸಕ್ಕೆ ತಂಡೋಪತಂಡವಾಗಿ ಆಗಮಿಸಿದ ಸಾರ್ವಜನಿಕರು ಎಸ್ಸೆಸ್ ಅವರಿಗೆ ಪುಷ್ಪಮಾಲೆ ಅರ್ಪಿಸಿ ಶುಭಾಶಯ ಸಲ್ಲಿಸಿದರು.

ಮಹಾನಗರ ಪಾಲಿಕೆ ಮಾಜಿ ಸದಸ್ಯ ಎಸ್.ಬಸಪ್ಪ ಅವರು 94 ಕೆ.ಜಿ. ಕೇಕ್ ಮಾಡಿಸುವ ಮೂಲಕ ಅಭಿಮಾನ ತೋರಿದರು.

ಶಾಸಕರುಗಳಾದ ಡಿ.ಜಿ.ಶಾಂತನಗೌಡ, ಕೆ.ಎಸ್.ಬಸವಂತಪ್ಪ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ.ಮಂಜಪ್ಪ, ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷರುಗಳಾದ ಅಥಣಿ ವೀರಣ್ಣ, ಅಣಬೇರು ರಾಜಣ್ಣ, ರೇಣುಕ ಪ್ರಸನ್ನ, ಗುರುಮೂರ್ತಿ (2ನೇ ಪುಟಕ್ಕೆ)

## ಜಮ್ಮು ವಿಭಾಗದಲ್ಲಿ ಶೂನ್ಯ ಸಹನೆ ಯೋಜನೆಗೆ ಸೂಚನೆ



ನವದೆಹಲಿ, ಜೂ.16- ಜಮ್ಮು ವಿಭಾಗದಲ್ಲಿ ಪ್ರದೇಶಗಳ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸುವ ಹಾಗೂ ಭಯೋತ್ಪಾದನೆಯ ವಿಚಾರದಲ್ಲಿ ಶೂನ್ಯ ಸಹನೆಯ ಯೋಜನೆಗಳನ್ನು ಜಾರಿಗೆ ತರುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭದ್ರತಾ ಪಡೆಗಳಿಗೆ ಸೂಚನೆ ನೀಡಿದ್ದಾರೆ.

ಈ ಯೋಜನೆಗಳನ್ನು ಕಾಶ್ಮೀರ ವಿಭಾಗದಲ್ಲಿ ಜಾರಿಗೆ ತಂದು ಯಶಸ್ಸು ಕಾಣಲಾಗಿದೆ, ಅವುಗಳನ್ನು ಜಮ್ಮು ವಿಭಾಗದಲ್ಲಿಯೂ ಜಾರಿಗೆ ತರಬೇಕು ಎಂದು ಅವರು ಹೇಳಿದ್ದಾರೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಹೊಸ ಕ್ರಮಗಳ ಮೂಲಕ ಭಯೋತ್ಪಾದಕರನ್ನು ಮಟ್ಟ ಹಾಕಲು ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಬದ್ಧವಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಭದ್ರತಾ ಪರಿಸ್ಥಿತಿಯನ್ನು ಅವಲೋಕಿಸಲು ಕರೆದಿದ್ದ ಉನ್ನತ ಮಟ್ಟದ ಸಭೆಯಲ್ಲಿ ಅವರು ಈ ಸೂಚನೆಯನ್ನು ಅಧಿಕಾರಿಗಳಿಗೆ (2ನೇ ಪುಟಕ್ಕೆ)

# ದರ ಏರಿಕೆಗೆ ಬಿಜೆಪಿ ನೀತಿಯೇ ಕಾರಣ

## ಪೆಟ್ರೋಲ್, ಡೀಸೆಲ್ ದರ ಏರಿಕೆ ಸಮರ್ಥಿಸಿಕೊಂಡ ಸಿಎಂ ಸಿದ್ದರಾಮಯ್ಯ

ವಿಜಯಪುರ, ಜೂ.16- ಪೆಟ್ರೋಲ್, ಡೀಸೆಲ್ ದರ ಏರಿಕೆಗೆ ಬಿಜೆಪಿ ನೀತಿಯೇ ಕಾರಣ ಎಂದು ಹೇಳಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯ, ತೈಲ ಬೆಲೆ ಏರಿಕೆಗೂ ಚುನಾವಣೆಗೂ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

2021 ರಲ್ಲಿ ಪೆಟ್ರೋಲ್ ದರದಲ್ಲಿ ಶೇ 35 ರೂಪಾಯಿ ತೆರಿಗೆ, ಡೀಸೆಲ್‌ಗೆ ಶೇ 24ರಷ್ಟು ತೆರಿಗೆ ಇತ್ತು. ಇದಕ್ಕೆ ಬಿಜೆಪಿಯೇ ಕಾರಣ ಎಂದು ಆರೋಪಿಸಿದರು.

ವಿಜಯಪುರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಪೆಟ್ರೋಲ್ ಬೆಲೆ 102.86 ಪೈಸೆ ಇದೆ, ಆಂಧ್ರ ಪ್ರದೇಶದಲ್ಲಿ 109.06 ರೂ., ಮಹಾರಾಷ್ಟ್ರದಲ್ಲಿ 104 ರೂ.,



ಮಧ್ಯಪ್ರದೇಶದಲ್ಲಿ 106.47 ರೂ. ಗಳಷ್ಟಿದೆ. ಈ ಹಿಂದೆ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗಲೂ ತೈಲ ಬೆಲೆ ಏರಿಕೆ ಮಾಡಿದ್ದರು ಎಂದು ಸಮರ್ಥಿಸಿಕೊಂಡರು.

ಪೆಟ್ರೋಲ್, ಡೀಸೆಲ್ ದರ ಹೆಚ್ಚಳ ಮಾಡಿದ್ದು ಲೋಕಸಭಾ ಚುನಾವಣೆಯಲ್ಲಿನ ಸೇಡು ಎಂಬ ಪ್ರತಿಪಕ್ಷ ನಾಯಕ ಆರ್. ಅಶೋಕ್ ಹೇಳಿಕೆಗೆ ತಿರುಗೇಟು ನೀಡಿದ ಅವರು, ಕಳೆದ ಚುನಾವಣೆಯಲ್ಲಿ ಒಂದೇ ಸ್ಥಾನ ನಾವು ಗಳಿಸಿದ್ದೆವು. 2024ರ ಚುನಾವಣೆಯಲ್ಲಿ 9 ಸ್ಥಾನಕ್ಕೆ ಬಂದಿದ್ದೇವೆ. ಅವರು 25 ಸ್ಥಾನದಿಂದ ರಿಂದ 17 ಸ್ಥಾನಕ್ಕೆ ಕುಸಿದಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ನಾವು ಸೋತಿಲ್ಲ, ಬಿಜೆಪಿಯವರು ಸೋತಿದ್ದಾರೆ ಎಂದು ಕುಟುಕಿದರು.

ಏತನ್ಮಧ್ಯೆ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ಕೇಂದ್ರ ಸರ್ಕಾರ ದೇಶದಲ್ಲಿ ಬೆಲೆ ನಿಯಂತ್ರಣ ಮಾಡಿದರೆ ರಾಜ್ಯ ಸರ್ಕಾರ ಕೃತಕವಾಗಿ ಬೆಲೆ ಏರಿಕೆ ಸನ್ನಿವೇಶ ಸೃಷ್ಟಿಸಿದೆ. ಇದು ಸರ್ಕಾರ ದಿವಾಳಿಯಾಗಿರುವುದಕ್ಕೆ ಸಾಕ್ಷಿ. ಲೋಕಸಭಾ ಚುನಾವಣೆಯಲ್ಲಿ ಜನರು ತಿರಸ್ಕಾರ ಮಾಡಿದ್ದಕ್ಕೆ ದ್ವೇಷ ಸಾಧಿಸುತ್ತಿದೆ ಎಂದು ಆರೋಪಿಸಿದ್ದಾರೆ.

ಸಂಸದ ಜಗದೀಶ ಶೆಟ್ಟರ್, ಗ್ಯಾರಂಟಿ (2ನೇ ಪುಟಕ್ಕೆ)

### ಬೇರೆ ರಾಜ್ಯಗಳಿಗಿಂತ ದರ ಕಡಿಮೆ: ಸಿಎಂ ಟ್ವೀಟ್

**ಬೆಂಗಳೂರು, ಜೂ.16- ರಾಜ್ಯ ಸರ್ಕಾರ ಪೆಟ್ರೋಲ್ ಮೇಲಿನ ವ್ಯಾಟ್ ಅನ್ನು ಶೇಕಡ 29.84ರಷ್ಟು ಮತ್ತು ಡೀಸೆಲ್ ಮೇಲೆ ಶೇಕಡ 18.44ರಷ್ಟು ಹೆಚ್ಚಿಸಿದೆ. ಈ ಹೆಚ್ಚಳದ ನಂತರವೂ, ಇಂಧನದ ಮೇಲಿನ ನಮ್ಮ ರಾಜ್ಯದ ತೆರಿಗೆಗಳು ದಕ್ಷಿಣ ಭಾರತದ ಹೆಚ್ಚಿನ ರಾಜ್ಯಗಳು ಮತ್ತು ಮಹಾರಾಷ್ಟ್ರದಂತಹ ಆರ್ಥಿಕ ಗಾತ್ರದ ರಾಜ್ಯಗಳಿಗಿಂತ ಕಡಿಮೆ ಇದೆ ಎಂದು ಎಕ್ಸ್ ನಲ್ಲಿ ಸಿಎಂ ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ.**

**ವ್ಯಾಟ್ ಹೆಚ್ಚಳದಿಂದ ಸಂಗ್ರಹವಾಗುವ ಹಣವನ್ನು ಅಗತ್ಯ ಸಾರ್ವಜನಿಕ ಸೇವೆಗಳು ಮತ್ತು ಅಭಿವೃದ್ಧಿ ಯೋಜನೆಗಳಿಗೆ ಬಳಸಲಾಗುತ್ತದೆ ಎಂದು ಮುಖ್ಯಮಂತ್ರಿ ವಿವರಿಸಿದರು. ಸಮತೋಲಿತ ಮತ್ತು ಜವಾಬ್ದಾರಿಯುತ** (2ನೇ ಪುಟಕ್ಕೆ)

## ಯಡಿಯೂರಪ್ಪ ವಿರುದ್ಧ ದ್ವೇಷದ ರಾಜಕಾರಣ : ಜಿ.ಎಂ.ಸಿದ್ದೇಶ್ವರ ಖಂಡನೆ



ದಾವಣಗೆರೆ, ಜೂ.16- ಪೋಕ್ಸೋ ಪ್ರಕರಣದ ನೆಪದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಕುಟುಂಬವನ್ನು ರಾಜಕೀಯವಾಗಿ ಮುಗಿಸಲು ರಾಜ್ಯದ ಕಾಂಗ್ರೆಸ್ ಸರ್ಕಾರ ಕುತಂತ್ರ ನಡೆಸಿದೆ ಎಂದು ಲೋಕಸಭೆ ಮಾಜಿ ಸದಸ್ಯ ಜಿ.ಎಂ. ಸಿದ್ದೇಶ್ವರ ಆರೋಪಿಸಿದ್ದಾರೆ.

ನಿನ್ನೆ ಇಲ್ಲಿ ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಮಾತನಾಡಿದ (2ನೇ ಪುಟಕ್ಕೆ)

'ನಾದ ಸಮ್ಮಾನ'



ದಾವಣಗೆರೆ, ಜೂ.16- ನಗರದ ನಿಜಲಿಂಗಪ್ಪ ಬಡಾವಣೆಯ ಶ್ರೀ ಸದ್ಗುರು ಬ್ರಹ್ಮ ಚೈತನ್ಯ ಮಹಾರಾಜರ ಮಂದಿರದಲ್ಲಿ ಭಾನುವಾರ ಪಂ. ಲಿಂಗರಾಜ್ ಬುವಾ ಯರಗುಪ್ಪಿ ಹಾಗೂ ದಿವಂಗತ ರಾಮಪ್ಪ ವೈ. ಹುಗ್ಗಣ್ಣನವರ ಸ್ಮರಣಾರ್ಥ 'ನಾದ ಸಮ್ಮಾನ' ಕಾರ್ಯಕ್ರಮ ನಡೆಯಿತು. ಮಾಜಿ ಕಾರ್ಪೊರೇಟರ್ ಮಹಾಬಲಿ ಕಾರ್ಯಕ್ರಮ ಉದ್ಘಾಟಿಸಿದರು. ಹಿರಿಯ ಕಲಾವಿದರಾದ ಶಿವಣ್ಣ, ಎಂ.ಎಸ್. ಕುಲಕರ್ಣಿ, ಮಾಲತೇಶ್ ಜೋಷಿ, ಗೋಪಿನಾಥ್, ಡಾ. ಅಶೋಕ್ ಹುಗ್ಗಣ್ಣನವರ್, ಗೌರಿ ಎಂ. ಜೋಷಿ, ಅನಿರುದ್ಧ, ವಿಶ್ವೇಶ್ವರ ಭಟ್ ಸೇರಿದಂತೆ ಇತರರಿದ್ದರು.

## ದೆಹಲಿ ಬಿಸಿಲ ತಾಪ ದಾವಣಗೆರೆಗೆ ಬರದಂತೆ ಎಚ್ಚೆತ್ತುಕೊಳ್ಳೋಣ

**ಎಸ್. ಎಸ್. ಜನುಮ ದಿನದ ಪ್ರಯುಕ್ತ ಏರ್ಪಡಿಸಿದ್ದ ಮನೆಗೆರಡು ಮರ-ದಾವಣಗೆರೆಗೆ ವರ, ಚಿತ್ರಕಲಾ ಸ್ಪರ್ಧೆಯಲ್ಲಿ ಗಡಿಗುಡಾಳ್ ಮಂಜುನಾಥ್**

ದಾವಣಗೆರೆ, ಜೂ. 16- ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರ 94 ನೇ ಜನುಮ ದಿನದ ಅಂಗವಾಗಿ ಬಾಸ್ಕೆಟ್ ಬಾಲ್ ಕ್ಲಬ್, ಡಾ. ಪ್ರಭಾ ಮಲ್ಲಿಕಾರ್ಜುನ್ ಅಭಿಮಾನಿಗಳ ಬಳಗ, ಜಿ. ಎಸ್. ಮಂಜುನಾಥ್ ಗಡಿಗುಡಾಳ್ ಸ್ನೇಹ ಬಳಗದ ಆಶ್ರಯದಲ್ಲಿ 'ಮನೆಗೆರಡು ಮರ-ದಾವಣಗೆರೆಗೆ ವರ' ಕಾರ್ಯಕ್ರಮ ಹಾಗೂ ಚಿತ್ರಕಲಾ ಸ್ಪರ್ಧೆ ನಡೆಸಲಾಯಿತು.

ಮಕ್ಕಳಲ್ಲಿ ಪರಿಸರ ಪ್ರೇಮ ಮೂಡಿಸುವ ಸಲುವಾಗಿ ಮಹಾನಗರ ಪಾಲಿಕೆ ಸದಸ್ಯ ಜಿ. ಎಸ್. ಮಂಜುನಾಥ್ ಗಡಿಗುಡಾಳ್ ಮತ್ತು ಸ್ನೇಹಿತರ ಬಳಗ ಚಿತ್ರಕಲಾ ಸ್ಪರ್ಧೆಯಲ್ಲಿ ಬಾಪೂಜಿ, ಗುಂಡಿ ಮಹದೇವಪ್ಪ, ಶಾಮನೂರು ಸರ್ಕಾರಿ ಪ್ರೌಢಶಾಲೆ, ಸೀತಮ್ಮ ವಸತಿಯುತ ಶಾಲೆ, ಬಕ್ಕೇಶ್ವರ , ಜಗದ್ಗುರು ಮುರುಘರಾಜೇಂದ್ರ ಪ್ರೌಢಶಾಲೆ, ವಿಶ್ವಭಾರತಿ (2ನೇ ಪುಟಕ್ಕೆ)







# ಸ್ನೇಹ ಸಮ್ಮಿಲನದಲ್ಲಿ ಹಳೇ ವಿದ್ಯಾರ್ಥಿಗಳ ಸಮಾಗಮ




## ಮಲೇಬೆನ್ನೂರಿನಲ್ಲಿ ಗಮನ ಸೆಳೆದ ಗುರುವಂದನಾ ಕಾರ್ಯಕ್ರಮ

ಮಲೇಬೆನ್ನೂರು, ಜೂ.16- ಇಲ್ಲಿನ ಶ್ರೀಮತಿ ಬಸಮ್ಮ ಕೆಂಚಪ್ಪ ಮಡಿವಾಳರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಳೇ ವಿದ್ಯಾರ್ಥಿಗಳು ಭಾನುವಾರ ಹಮ್ಮಿಕೊಂಡಿದ್ದ ಸ್ನೇಹ ಸಮ್ಮಿಲನ ಹಾಗೂ ಗುರುವಂದನಾ ಕಾರ್ಯಕ್ರಮವು ಅರ್ಥಪೂರ್ಣವಾಗಿ ಜರುಗಿತು.

ಶಾಲೆಯಲ್ಲಿ ಈ ಹಿಂದೆ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವ ಮತ್ತು ಈಗ ಸೇವೆ ಸಲ್ಲಿಸುತ್ತಿರುವ ಎಲ್ಲಾ ಶಿಕ್ಷಕರುಗಳನ್ನು ಸನ್ಮಾನಿಸಿ, ಗೌರವಿಸಿ ಅವರ ಸೇವೆಯನ್ನು ಸ್ಮರಿಸುವ ಮೂಲಕ ಹಳೇ ವಿದ್ಯಾರ್ಥಿಗಳು ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಶಾಲೆಯ ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿರುವ ದಾವಣಗೆರೆ ಜನತಾ ಬಜಾರ್ ನಿರ್ದೇಶಕ ಪಿ.ಹೆಚ್. ಶಿವಕುಮಾರ್, ಸಂಘದ ಖಜಾಂಚಿ ಹಾಗೂ ವರ್ತಕ ಎಂ.ಕೆ.ಗಜೇಂದ್ರ ಸ್ವಾಮಿ, ಕಾರ್ಯದರ್ಶಿ ಜಿ.ಬೇವಿನಹಳ್ಳಿಯ ಜಿ. ಎಸ್.ಶಿವರಾಜ್, ಬಟ್ಟೆ ಅಂಗಡಿ ವಿಶ್ವ, ರೈಸ್ ಮಿಲ್ ಮಾಲೀಕರಾದ ಬಿ.ವಿ.ರುದ್ರೇಶ್, ಬಿ.ಎನ್.ವೀರೇಶ್, ಬಿ.ಸಿ.ಸತೀಶ್, ಬಿಬಿಎಂಪಿ ಇಇ ಆತೀಫ್, ಇಂಜಿನಿಯರ್ ವೈ.ಆರ್.ಪುನೀತ್, ಅಂಗನವಾಡಿ ಕಾರ್ಯಕರ್ತೆ ಕೆ.ಜಿ.ಛಾಯಿನಿ, ಉಪನ್ಯಾಸಕಿ ವೈ.ಆರ್.ಚಂದ್ರಪ್ರಭಾ, ಎಸಿಎಫ್ ಕೆ.ಬಿ. ಮೋಹನ್ ಕುಮಾರ್, ಸಾಫ್ಟ್‌ವೇರ್ ಇಂಜಿನಿಯರ್ ಎನ್.ಪಿ.ಅಶ್ವಿನಿ, ಶಿಕ್ಷಕಿಯರಾಗಿ ರುವ ಓ.ಜಿ.ಉಷಾ, ಬಿ.ವಿ. ನೇತ್ರಾವತಿ, ಎಂ.ಆರ್.ಹಾಲಮ್ಮ, ಶಿಕ್ಷಕ ಡಿ.ಟಿ.ಸಂಜಯ್, ಕೊಪ್ಪಳ ಮೆಡಿಕಲ್ ಕಾಲೇಜಿನ ಪ್ರೊಫೆಸರ್ ಡಾ.ಬಿ.ಎನ್. ಸೀಮಾ, ಆರ್‌ಎಫ್‌ಓ ಅಮೃತಾ, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಐರಣಿ ಅಣ್ಣಪ್ಪ, ಜಿಲ್ಲಾ ಯುವ ಕಾಂಗ್ರೆಸ್ ಪದಾಧಿಕಾರಿ ಅಫ್ರೋಜ್‌ಖಾನ್, ಪ್ರಗತಿಪರ ಯುವ ರೈತ ಯಲವಟ್ಟಿಯ ಹನುಮಂತಗೌಡ, ಜಿಗಳಿಯ ಸೌಮ್ಯ, ಎನ್.ಡಿ.ವರ್ಷಿಣಿ, ರಾಜೇಶ್ವರಿ, ಶ್ವೇತಾ, ಸಚಿತ್ರಾ, ಲತಾಶ್ರೀ, ಕೊಮಾರನಹಳ್ಳಿ ಸಾಗರ್, ಬೇವಿನಹಳ್ಳಿ ಕಿರಣ್ ಅವರುಗಳು ಮಾತನಾಡಿ, ತಾವು ಓದಿದ ದಿನಗಳನ್ನು ಮೆಲುಕು ಹಾಕಿ, ಶಿಕ್ಷಕರಿಗೆ ಕೃತಜ್ಞತೆ ಸಲ್ಲಿಸಿದರು.

ಹಳೇ ವಿದ್ಯಾರ್ಥಿಗಳು ತಮ್ಮ ಪರಿಚಯ ಮಾಡಿಕೊಳ್ಳುವಾಗ ತಾವು ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳನ್ನು ಹೇಳಿದಾಗ ಪಾಠ ಹೇಳಿಕೊಟ್ಟ ಶಿಕ್ಷಕರು ಖುಷಿ ಪಟ್ಟು ಬಾವುಕರಾದರು.

ಈ ವೇಳೆ ನಿವೃತ್ತ ಶಿಕ್ಷಕರಾದ ಎಂ. ರಾಮಲಿಂಗಪ್ಪ, ನಲ್ಕುದುರೆ ಬಸವರಾಜಪ್ಪ, ಎಸ್.ರೇವಣಸಿದ್ದಪ್ಪ, ಮಹೇಶ್ವರಪ್ಪ ಎಫ್. ಮಳಿಯಪ್ಪನವರ್, ಶಿವಾನಂದಪ್ಪ ಮಡಿವಾಳರ ಮತ್ತು ಶಾಲೆಯ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ, ಶಿಕ್ಷಕರಾದ ಯಂಕನಾಯ್ಕ, ಜಿ.ಕೆ.ಬಸವರಾಜಪ್ಪ, ಸಿ. ಹನುಮಂತಪ್ಪ, ಪ್ರೇಮಲೀಲಾ ಬಾಯಿ, ಎಂ.ಕೆ.ಸುನೀಲ್ ಹಾಗೂ ಈ ಹಿಂದೆ ಸೇವೆ ಸಲ್ಲಿಸಿದ್ದ ಶಿಕ್ಷಕಿಯರಾದ ಎಂ.ಕೆ.ಮಧು, ವಿ. ಎಸ್.ವಿಜಯ ಅವರನ್ನು ಮತ್ತು ಶಾಲಾ ಮಾತೆಯಾಗಿದ್ದ ದಿ.ಗೌರಮ್ಮ ಅವರ ಪುತ್ರ ಎನ್.ಎಂ.ಶಿವರಾಜಯ್ಯ, ಸಹ ಶಿಕ್ಷಕರಾಗಿದ್ದ ದಿ.ಕುಂಬಳೂರು ಹನುಮಂತಪ್ಪ ಅವರ ಪತ್ನಿ ಶ್ರೀಮತಿ ಕವಿತಾ ಅವರುಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆಯ ಹಿರಿಯ ನಿರ್ದೇಶಕ ಡಾ. ಬಿ.ಚಂದ್ರಶೇಖರ್, ಶಾಲಾ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ ಮಾತನಾಡಿದರು.

ಅಂದು ಎಂ.ಕೆ.ಕರಿಬಸಪ್ಪ, ಜಿಗಳಿ ರುದ್ರೇಗೌಡ್ರು, ಹೆಚ್.ಷಣ್ಮುಖಯ್ಯ, ಎಸ್. ಹನುಮಂತಪ್ಪ, ಎನ್.ಲಕ್ಷ್ಮಣ ಶ್ರೇಷ್ಠಿ, ಹೆಚ್.ಜಿ.ಗುರುಸಿದ್ದಪ್ಪ, ಡಾ.ಸಾತೇನಹಳ್ಳಿ, ಡಾ.ರಂಗನಾಥ್, ಡಾ. ಬಿ.ಚಂದ್ರಶೇಖರ್ ಸೇರಿ ಈ ಶಾಲೆಯನ್ನು ಆರಂಭಿಸಿದ್ದರು ಎಂದು ಅವರು ಹೇಳಿದರು.

ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಡಾ. ವಿಜಯರಾಘವ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವಿದ್ಯಾಸಂಸ್ಥೆಯ ಬೆಳ್ಳಿ ಹಬ್ಬದ ಸವಿನೆನಪಿಗಾಗಿ ಹೊರತಂದ 'ಬೆಳ್ಳಿ ಚುಕ್ಕಿ' ಸ್ಮರಣ ಸಂಚಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸಿದ ಪತ್ರಕರ್ತ ಜಿಗಳಿ ಪ್ರಕಾಶ್ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಿ, ಅಭಿನಂದಿಸಲಾಯಿತು.

ವಿದ್ಯಾಸಂಸ್ಥೆಯ ಕಾರ್ಯದರ್ಶಿ ಹೆಚ್. ಜಿ.ಚಂದ್ರಶೇಖರ್, ನಿರ್ದೇಶಕರಾದ ಹೆಚ್. ಎಸ್.ವೀರಭದ್ರಯ್ಯ, ಎಂ.ಆರ್.ಮಾರಪ್ಪ, ಎಂ.ಕೆ.ಶರತ್, ಶ್ರೀಮತಿ ಶಾಂತಮ್ಮ ಎಂ.ಕೆ. ನಾಗರಾಜ್ ಮತ್ತು ಇಂಜಿನಿಯರ್ ಶೇಷಾದ್ರಿ ಭಾಗವಹಿಸಿದ್ದರು.

## ರಂಭಾಪುರಿ ಜಗದ್ಗುರುಗಳಿಂದ ಸಂಸದೆ ಪ್ರಭಾ ಎಸ್ಸೆಸ್ಸೆಂಗೆ ಆಶೀರ್ವಾದ



ದಾವಣಗೆರೆ, ಜೂ.16- ನಗರದ ಶ್ರೀಮದ್ ಅಭಿನವ ರೇಣುಕ ಮಂದಿರದ ಶ್ರೀ ರಂಭಾಪುರೀಶ ನಿವಾಸದಲ್ಲಿ ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಬಾಳೇಹೊನ್ನೂರಿನ ಶ್ರೀ ವೀರಸೋಮೇಶ್ವರ ರಂಭಾಪುರಿ ಜಗದ್ಗುರುಗಳ ಆಶೀರ್ವಾದ ಪಡೆದರು. ಯುವ ಮುಖಂಡರಾದ ಆರ್.ಟಿ.ಪ್ರಶಾಂತ್ ದುಗ್ಗತ್ತಿಮಠ, ದೇವರಮನಿ ಯೋಗೀಶ್, ಹರೀಶ್, ವಿಜಯ್ ಕುಮಾರ್ ಉಪಸ್ಥಿತರಿದ್ದರು.

## ಐಎಂಎ ಮಹಿಳಾ ಬಳಗದಿಂದ ಪರಿಸರ ದಿನ



ದಾವಣಗೆರೆ, ಜೂ.16- ಪರಿಸರ ದಿನಾಚರಣೆಯ ಪ್ರಯುಕ್ತ ಐಎಂಎ ಮಹಿಳಾ ಬಳಗದ ಸದಸ್ಯೆಯರಿಂದ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ವೇದಿಕೆಯಲ್ಲಿ ಬಳಗದ ಅಧ್ಯಕ್ಷರಾದ ತ್ರಿವೇಣಿ ಹಾಗೂ ಕಾರ್ಯದರ್ಶಿ ಶಿವಪ್ರಭಾ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸುಧಾ, ಯಶೋಧ ವಿಶ್ವನಾಥ್, ಗಾಯಿತ್ರಿ, ಯಶೋಧ ಹಾಗೂ ಸುಮಾ ನಡೆಸಿಕೊಟ್ಟರು.

## ಮೂರು ಹಂತದಲ್ಲಿ ವೀರಶೈವ ಮಹಾಸಭಾದ ಚುನಾವಣೆ

ದಾವಣಗೆರೆ, ಜೂ.16- ಅಖಿಲ ಭಾರತ ವೀರಶೈವ ಮಹಾಸಭಾದ 2024ರಿಂದ 29ರ ಅವಧಿಯ ಚುನಾವಣೆಯು 3 ಹಂತದಲ್ಲಿ ನಡೆಯಲಿದೆ ಎಂದು ಮಹಾಸಭಾದ ಚುನಾವಣಾಧಿಕಾರಿ ಎಂ.ಬಿ. ದ್ಯಾಬೇರಿ ತಿಳಿಸಿದ್ದಾರೆ.

ಜೂ.20ರಂದು ಮತದಾರರ ಪಟ್ಟಿ ಪ್ರಕಟಿಸಲಾಗುವುದು ಮತ್ತು ಮತದಾರರ ಪಟ್ಟಿಯನ್ವಯ ಚುನಾವಣಾ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದ್ದು, ಜುಲೈ 21, ಆಗಸ್ಟ್ 25 ಮತ್ತು ಸೆಪ್ಟೆಂಬರ್ 29ರಂದು ಮಹಾಸಭಾದ ಮೂರು ಹಂತದ ಮತದಾನ ಪ್ರಕ್ರಿಯೆ ನಡೆಯಲಿದೆ ಎಂದಿದ್ದಾರೆ.

**ಮೊದಲ ಹಂತದ ಚುನಾವಣೆ :** ತಾಲ್ಲೂಕು, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಘಟಕದ ಅಧ್ಯಕ್ಷ ಹಾಗೂ ಕಾರ್ಯನಿರ್ವಾಹಕ ಸಮಿತಿ ರಚಿಸಲು ಮೊದಲ ಹಂತದ ಚುನಾವಣೆ ನಡೆಯಲಿದ್ದು, ಜೂನ್ 27ರ ಬೆಳಗ್ಗೆ 10.30ರಿಂದ ನಾಮಪತ್ರ ಸ್ವೀಕಾರ ಪ್ರಾರಂಭವಾಗಿ, ಜುಲೈ 4ರಂದು ನಾಮಪತ್ರ ಸಲ್ಲಿಕೆಗೆ ಕೊನೆ ದಿನವಾಗಿದೆ.

ಜುಲೈ 5ರಂದು ನಾಮಪತ್ರ ಪರಿಶೀಲನೆ ನಡೆಯುವುದು. 8ರಂದು ನಾಮಪತ್ರ ಹಿಂಪಡೆಯಲು ಕೊನೆ ದಿನ ಮತ್ತು 21ಕ್ಕೆ ಮೊದಲ ಹಂತದ ಚುನಾವಣೆ ನಡೆಯಲಿದೆ.

**2ನೇ ಹಂತದ ಚುನಾವಣೆ :** ರಾಜ್ಯ ಘಟಕಗಳ ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ಸಮಿತಿ ಸದಸ್ಯ ಮತ್ತು ಮಹಾಸಭೆಯ ಕಾರ್ಯಕಾರಿ ಸಮಿತಿ ರಚಿಸಲು 2ನೇ ಹಂತದ ಚುನಾವಣೆ ನಡೆಯಲಿದ್ದು, ಆಗಸ್ಟ್ 1ರ ಬೆಳಗ್ಗೆ 10.30ರಿಂದ ನಾಮಪತ್ರ ಸ್ವೀಕಾರ ಪ್ರಾರಂಭವಾಗಿ, ಆಗಸ್ಟ್ 7ರಂದು ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದೆ.

ಆಗಸ್ಟ್ 8ರಂದು ನಾಮಪತ್ರ ಪರಿಶೀಲನೆ ಮಾಡಲಾಗುವುದು. 11ಕ್ಕೆ ನಾಮಪತ್ರ ಹಿಂಪಡೆಯಲು ಕೊನೆ ದಿನವಾಗಿದ್ದು, 25ನೇ ತಾರೀಖಿಗೆ 2ನೇ ಹಂತದ ಚುನಾವಣೆ ನಡೆಯಲಿದೆ.

**3ನೇ ಹಂತದ ಚುನಾವಣೆ :** ಮಹಾಸಭಾದ ಅಧ್ಯಕ್ಷ ಸ್ಥಾನಕ್ಕೆ 3ನೇ ಹಂತದ ಚುನಾವಣೆ ಜರುಗಲಿದ್ದು, ಸೆಪ್ಟೆಂಬರ್ 5ರ ಬೆಳಗ್ಗೆ 10.30ಕ್ಕೆ ನಾಮಪತ್ರ ಸ್ವೀಕಾರ ಪ್ರಾರಂಭವಾಗಿ, 11ಕ್ಕೆ ನಾಮಪತ್ರ ಸಲ್ಲಿಕೆ ಅಂತ್ಯವಾಗಲಿದೆ.

12 ರಂದು ನಾಮಪತ್ರ ಪರಿಶೀಲನೆ ನಡೆಯಲಿದ್ದು, 15ಕ್ಕೆ ನಾಮಪತ್ರ ಹಿಂಪಡೆಯಬಹುದು ಮತ್ತು 29ಕ್ಕೆ ಮೂರನೇ ಹಂತದ ಮತದಾನ ನಡೆಯಲಿದೆ. ಚುನಾವಣೆ ನಡೆದ ನಂತರ ಫಲಿತಾಂಶ ಬರಲಿದೆ ಎಂದು ಪ್ರಕಟಣೆ ತಿಳಿಸಿದೆ.

## ತಾಪ ದಾವಣಗೆರೆಗೆ ಬರದಂತೆ ಎಚ್ಚೆತ್ತುಕೊಳ್ಳೋಣ



(1ನೇ ಪುಟದಿಂದ) ಮುಂತಾದ ಪ್ರೌಢಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸ್ಥಳದಲ್ಲಿ ಪರಿಸರ ಕುರಿತ ಚಿತ್ರಗಳನ್ನು ರಚಿಸಿ ಗಮನ ಸೆಳೆದರು.

ಪರಿಸರ ದಿನಾಚರಣೆ ಮತ್ತು ಶಾಮನೂರು ಶಿವಶಂಕರಪ್ಪನವರ ಹುಟ್ಟುಹಬ್ಬದ ಪ್ರಯುಕ್ತ ಎಂ.ಸಿ.ಸಿ ಬಿ ಬ್ಲಾಕ್‌ನಲ್ಲಿ ಗಿಡಗಳನ್ನು ನೆಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಮಹಾನಗರ ಪಾಲಿಕೆಯ ಎಂ.ಸಿ.ಸಿ. ಬಿ ಬ್ಲಾಕ್ ಭಾಗದ ಸದಸ್ಯ ಗಡಿಗುಡಾಳ್ ಮಂಜುನಾಥ್ ಮಾತನಾಡಿ, ಈಗಾಗಲೇ ದೆಹಲಿಯಲ್ಲಿ 52 ಡಿಗ್ರಿ ಬಿರುಬಿಸಿಲಿನಿಂದ ಜನ ತತ್ತರಿಸುತ್ತಿರುವುದನ್ನು ನೋಡಿದ್ದೇವೆ. ದೆಹಲಿಯ ಪರಿಸ್ಥಿತಿ ದಾವಣಗೆರೆಗೆ ಬರಬಾರದೆಂದರೆ ನಾವು ಇಂದೇ ಎಚ್ಚೆತ್ತು ಮುಂದಾಗುವ ದುಷ್ಪರಿಣಾಮಗಳನ್ನು ತಡೆಯಬೇಕು. ಸಾರ್ವಜನಿಕರು ಮನೆಯ ಮುಂದೆ ಎರಡೆರಡು ಗಿಡಗಳನ್ನು ನೆಡಲು ತನು-ಮನ-ಧನದಿಂದ ಸಹಕರಿಸಬೇಕು ಎಂದು ಕರೆ ನೀಡಿದರು.

ಕರುಣಾ ಸೇವಾ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಮಾತನಾಡಿ, ಪ್ರಕೃತಿಯೇ ದೇವರು, ಪ್ರಕೃತಿಯೇ ಧರ್ಮ. ಪ್ರಕೃತಿ ಪೋಷಣೆ ನಮ್ಮ ಪೋಷಣೆಯೇ ಹೊರತು, ಪ್ರಕೃತಿಗೆ ನಮ್ಮಿಂದ ಯಾವುದೇ ಲಾಭವಿಲ್ಲ. ಹಾಗಾಗಿ ಶುದ್ಧ ಗಾಳಿ, ನೀರು, ಆಕಾಶ, ಆಹಾರ, ಮರಗಳು, ಪ್ರಕೃತಿಯೇ ನಮ್ಮ ದೇವರು ಎಂದು ಬಣ್ಣಿಸಿದರು.

ಅತ್ಯಗತ್ಯವಾದ ಆಮ್ಲಜನಕದ ಸಿಲಿಂಡರ್ ಆಗಿರುವ ಮರ ಮುಖ್ಯ. 'ಮನೆಗೆರಡು ಮರ ಪ್ರಾಣವಾಯುವಿನ ವರ, ಮರ ಕಡಿದರೆ ಮಗನ ಕಡಿದಂತೆ. ಇಂದು ಮರ ಮಾಯ, ನಾಳೆ ನಾವೂ ಮಾಯ' ಎನ್ನುವ ಮಾತಿನಂತೆ

ದವನಗಿರಿ ಅಭಿವೃದ್ಧಿ ಹೊಂದುತ್ತಿದ್ದು ಅದರೊಟ್ಟಿಗೆ ಮರಗಳ ಕಡಿದು ಪ್ರಾಣ ವಾಯುವಿನ ಕೊರತೆಯನ್ನು ಮಾಡಿಕೊಳ್ಳುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ಮಾತನಾಡಿ, ಮರಗಳನ್ನು ಬೆಳೆಸುವುದು ಮತ್ತು ಸಂರಕ್ಷಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಹೆಚ್ಚು ಉಪಕಾರಿ ಜನರು ಮನೆಯ ಮುಂದೆ ಗಿಡಗಳನ್ನು ನೆಟ್ಟು ಪರಿಸರ ಪ್ರೇಮದ ಈ ಕೆಲಸಕ್ಕೆ ಎಲ್ಲರೂ ಸಹಕರಿಸಬೇಕು. ಈ ವರ್ಷ 16 ಸಾವಿರ ಸಸಿಗಳನ್ನು ನಗರದಾದ್ಯಂತ ನೆಡುವ ಯೋಜನೆ ಹಾಕಿಕೊಳ್ಳಲಾಗಿದೆ. ಮನೆಗೆರಡು ಮರ ತೀರ್ಮಾನ ತೆಗೆದುಕೊಳ್ಳಲಾಗಿದೆ. ಸದ್ಯದಲ್ಲಿಯೇ ಕಾರ್ಯರೂಪಕ್ಕೆ ಬರಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಾರ್ಡ್ ನ ಪ್ರಮುಖರಾದ ಗುರುಮೂರ್ತಿ, ಮಂಜುಳಾ ಬಸವಲಿಂಗಪ್ಪ, ಆರ್‌ಟಿಓ ರಾಜು, ಹೆಲ್ತ್ ಇನ್ಸ್‌ಪೆಕ್ಟರ್ ಪ್ರಕಾಶ್, ಹೆಲ್ತ್ ದಫೇದಾರ್ ರಮೇಶ್, ಭದ್ರಾ ಕಾಲೇಜಿನ ಸಂಕೇತ್, ಎಂ. ವಿಜಯಗೌಡರು,

ಶ್ರೀರಾಮಮೂರ್ತಿ ಸಪ್ತಗಿರಿ, ಭರತ್, ಪ್ರಮೋದ್, ಪ್ರವೀಣ ಕಂಬಳಿ, ಗುರು, ಬಸವ ರಾಜ್, ನೀಲಕಂಠಪ್ಪ, ನಿಖಿಲ್ ಮತ್ತು ಪಾಲಿಕೆಯ ನೌಕರರು ಮತ್ತಿತರರು ಹಾಜರಿದ್ದರು.

## ನಗರದ ಶ್ರೀರಾಮ ದೇವಸ್ಥಾನದಲ್ಲಿ ನಾಡಿದ್ದು 'ಯಕ್ಷಪಕ್ಷ' ಕಾರ್ಯಕ್ರಮಗಳು

ದಾವಣಗೆರೆ, ಜೂ.16- ಫಾಟಕ್ ಯಕ್ಷ ಸಂಸ್ಕೃತಿ ಟ್ರಸ್ಟ್, ಬೆಂಗಳೂರು ವತಿಯಿಂದ 'ಯಕ್ಷಪಕ್ಷ' ತಾಳ ಮದ್ದಲೆ ಕೂಟಗಳು ನಗರದ ಪಿ.ಜೆ. ಬಡಾವಣೆಯಲ್ಲಿರುವ ಖಮಿತ್ಕರ್ ಈಶ್ವರಪ್ಪನವರ ಶ್ರೀರಾಮ ದೇವಸ್ಥಾನದಲ್ಲಿ ಇದೇ ದಿನಾಂಕ 19 ಮತ್ತು 20 ರಂದು ನಡೆಯಲಿವೆ. ಪ್ರತಿದಿನ ಸಂಜೆ 6 ಗಂಟೆಗೆ ಕಾರ್ಯಕ್ರಮ ನಡೆಯಲಿದೆ.

ದಿನಾಂಕ 19 ರ ಬುಧವಾರ 'ವಾಮನ ಚರಿತ್ರೆ' ಪ್ರಸಂಗವಿದ್ದು, 20 ರ ಗುರುವಾರ 'ಶ್ರೀರಾಮ ನಿರ್ಯಾಣ' ಪ್ರದರ್ಶನಗೊಳ್ಳಲಿದೆ. ಹಿಮ್ಮೇಳದಲ್ಲಿ ವಿದ್ವಾನ್ ಗಣಪತಿ ಭಟ್, ಎ.ಪಿ.ಫಾಟಕ್ ಮತ್ತು ಅರ್ಥಧಾರಿಗಳಾಗಿ ಉಮಾಕಾಂತ್ ಭಟ್, ವಾಸುದೇವ ರಂಗ ಭಟ್, ಶೇಣಿ ವೇಣುಗೋಪಾಲ್ ಭಟ್, ಅಜಿತ್ ಕಾರಂತ್ ಮತ್ತು ಸುಹಾಸ್ ಮರಾಠೆ ಪಾಲ್ಗೊಳ್ಳುವರು.

## ದರ ಏರಿಕೆಗೆ ಬಿಜೆಪಿ ನೀತಿಯೇ ಕಾರಣ

(1ನೇ ಪುಟದಿಂದ) ಯೋಜನೆಗಳಿಂದ ರಾಜ್ಯದ ಬೊಕ್ಕಸ ಖಾಲಿಯಾಗಿದೆ. ಇದಕ್ಕಾಗಿ ಕಾಂಗ್ರೆಸ್ ಸರ್ಕಾರವು ಜನರ ಕಿಸೆಗೆ ಕೈಹಾಕುತ್ತಿದೆ. ಜನಸಾಮಾನ್ಯರ ಮೇಲೆ ಹೊರೆ ಹಾಕುವ ಬದಲು ಗ್ಯಾರಂಟಿ ಯೋಜನೆಗಳನ್ನೇ ನಿಲ್ಲಿಸಲಿ ಎಂದು ಕಿಡಿಕಾರಿದ್ದಾರೆ.

## ಬೇರೆ ರಾಜ್ಯಗಳಿಗಿಂತ ದರ ಕಡಿಮೆ: ಸಿಎಂ ಟ್ವೀಟ್

**(1ನೇ ಪುಟದಿಂದ) ಆಡಳಿತವನ್ನು ನಿರ್ವಹಿಸಲು ರಾಜ್ಯದ ಬದ್ಧತೆಯನ್ನು ಸಿಎಂ ಸಿದ್ದರಾಮಯ್ಯ ಪುನರುಚ್ಚರಿಸಿದ್ದಾರೆ. ಇದೇ ವೇಳೆ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಸಿದ್ದರಾಮಯ್ಯ, ಕೇಂದ್ರ ಸರ್ಕಾರವು ವ್ಯಾಟ್ ಹೊಂದಾಣಿಕೆಗಳನ್ನು ಮಾಡುತ್ತಿದೆ ಎಂದು ಆರೋಪಿಸಿದರು. ಬಿಜೆಪಿ ಆಡಳಿತದ ಅವಧಿಯಲ್ಲಿ ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿ ಕರ್ನಾಟಕದ ಸಂಪನ್ಮೂಲಗಳನ್ನು ಬೇರೆ ರಾಜ್ಯಗಳಿಗೆ ಹರಿಸುವ ಪ್ರಯತ್ನ ನಡೆದಿದೆ ಎಂದು ಆರೋಪಿಸಿದ್ದಾರೆ.**

## ಯಡಿಯೂರಪ್ಪ ವಿರುದ್ಧ ದ್ವೇಷದ ರಾಜಕಾರಣ : ಜಿ.ಎಂ.ಸಿದ್ದೇಶ್ವರ ಖಂಡನೆ

(1ನೇ ಪುಟದಿಂದ) ಅವರು, 82 ವರ್ಷ ಇಳಿ ವಯಸ್ಸಿನಲ್ಲಿರುವ ಯಡಿಯೂರಪ್ಪ ಅವರ ವಿರುದ್ಧ ಕಾಂಗ್ರೆಸ್ ಸರ್ಕಾರದ ವರ್ತನೆಯನ್ನು ಗಮನಿಸುತ್ತಾ ಹೊರಟರೆ, ಮೇಲ್ನೋಟಕ್ಕೆ ದ್ವೇಷದ ರಾಜಕಾರಣ ಮಾಡುತ್ತಿರುವುದು ಸಾಬೀತಾಗುತ್ತದೆ ಎಂದು ಹೇಳಿದರು.

ಯಡಿಯೂರಪ್ಪ ಅವರನ್ನು ಜೈಲಿಗೆ ಕಳುಹಿಸಬೇಕು ಎಂದು ಕಾಂಗ್ರೆಸ್ ಸರ್ಕಾರ ಹಠ ತೊಟ್ಟಂತಿದೆ ಅದರ ವರ್ತನೆ. ಅವರ ವ್ಯಕ್ತಿತ್ವಕ್ಕೆ ಮಸಿ ಬಳಿಯಲು ನಡೆಸುತ್ತಿರುವ ಪ್ರಯತ್ನ ಫಲಪ್ರದವಾಗದು ಎಂದು ಸಿದ್ದೇಶ್ವರ ತಿಳಿಸಿದರು.

ಈಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಸೋಲಿನಿಂದ ಹತಾಶೆಯಾಗಿರುವ ಕಾಂಗ್ರೆಸ್ ಪಕ್ಷವು ಕಳೆದ 3-4 ತಿಂಗಳ ಹಿಂದೆ ಯಡಿಯೂರಪ್ಪ ವಿರುದ್ಧ ದಾಖಲಾಗಿ ಸತ್ತ ಹೋಗಿದ್ದ ಪೋಕ್ಸೋ ಪ್ರಕರಣಕ್ಕೆ ಇದೀಗ ಏಕಾಏಕಿ ಚಾಲನೆ ಕೊಟ್ಟಿರುವ ಹಿನ್ನೆಲೆ ಏನು ಎಂದು ಪ್ರಶ್ನಿಸಿದರು.

ಯಡಿಯೂರಪ್ಪ ಅವರ ವಿರುದ್ಧ ದ್ವೇಷದ ರಾಜಕಾರಣ ಮುಂದುವರೆಸಿದ್ದೇ ಆದಲ್ಲಿ ಬಿಜೆಪಿ ಬೀದಿಗಿಳಿದು ಹೋರಾಟ ನಡೆಸಬೇಕಾದೀತು ಎಂದು ಸಿದ್ದೇಶ್ವರ ಎಚ್ಚರಿಸಿದ್ದಾರೆ.

## ಪಲ್ಲಾಗಟ್ಟೆ ಗ್ರಾ.ಪಂ ಅಧ್ಯಕ್ಷರಾಗಿ ರೇಣುಕಮ್ಮ



ಜಗಳೂರು, ಜೂ.16- ತಾಲ್ಲೂಕಿನ ಪಲ್ಲಾಗಟ್ಟೆ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಎಚ್.ರೇಣುಕಮ್ಮ ಗುರುಮೂರ್ತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ತೆರವಾದ ಅಧ್ಯಕ್ಷ ಸ್ಥಾನಕ್ಕೆ ನಿನ್ನೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಒಬ್ಬರೇ ನಾಮಪತ್ರ ಸಲ್ಲಿಸಿದ್ದು, ನಾಮಪತ್ರ ಊರ್ಜಿತವಾದ ಹಿನ್ನೆಲೆಯಲ್ಲಿ ಚುನಾವಣೆ ಅಧಿಕಾರಿ ತಾ.ಪಂ.ಪ್ರಭಾರಿ ಇಓ ಮಿಥುನ್ ಕಿಮಾವತ್ ಅವಿರೋಧ ಆಯ್ಕೆ ಘೋಷಿಸಿದರು.

ಈ ಸಂದರ್ಭದಲ್ಲಿ ಗ್ರಾ.ಪಂ ಉಪಾಧ್ಯಕ್ಷ ವಿರುಪಾಕ್ಷಪ್ಪ, ಮಾಜಿ ಅಧ್ಯಕ್ಷ ಶೇಖರಪ್ಪ ಗ್ರಾ.ಪಂ ಸದಸ್ಯರಾದ ಯಲ್ಲಮ್ಮ ಬಸವರಾಜ್, ಬಸವರಾಜ್, ರತ್ನಮ್ಮ ನಾರಪ್ಪ, ಜಿ. ಕೆ.ಶೇಖರಪ್ಪ, ದಿವ್ಯ ಸತೀಶ್, ಬಿ.ವಿ.ವೀರಪ್ಪ, ಎಂ.ಎಚ್.ರವೀಜಾ ತಾಜ್ ಪೀರ್, ರತ್ನಮ್ಮ ಗುರುಸ್ವಾಮಿ, ಕೆ.ಎಚ್.ನಾಗರಾಜ್, ಚಂದ್ರಮ್ಮ ಪ್ರಕಾಶ್, ಹೊನ್ನಮ್ಮ ನಾಗಪ್ಪ, ಗಾಯತ್ರಿ ಹನುಮಂತಪ್ಪ, ಶಿವಗಂಗಾ, ಮಂಜಕ್ಕ ಮುಂತಾದವರು ಇದ್ದರು.

## ಬನ್ನಿಕೋಡು ಎನ್ನೆಸ್ಸೆಸ್ : ಇಂದು ಪವಾಡ ಗುಟ್ಟು ಬಯಲು ಕಾರ್ಯಕ್ರಮ

ಹರಿಹರ ತಾಲ್ಲೂಕು ಬನ್ನಿಕೋಡು ಗ್ರಾಮದಲ್ಲಿ ದಾವಣಗೆರೆ ಡಿಆರ್‌ಎಂ ಕಾಲೇಜು ಹಾಗೂ ಬನ್ನಿಕೋಡು ಗ್ರಾಮಸ್ಥರ ಸಹಯೋಗದಲ್ಲಿ ಹಮ್ಮಿಕೊಂಡಿರುವ 2023-24 ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರದಲ್ಲಿ ಇಂದು ಸಂಜೆ 6 ಗಂಟೆಗೆ ವಿಜ್ಞಾನದ ಬಗ್ಗೆ ಅರಿವು ಮೂಡಿಸುವ 'ಪವಾಡ ಗುಟ್ಟು ಬಯಲು' ಕಾರ್ಯಕ್ರಮ ನಡೆಯಲಿದೆ.

ಬೆಳಿಗ್ಗೆ 6.30 ಕ್ಕೆ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಬಿ.ಸಿ. ವಸಂತ ಕುಮಾರ್ ಧ್ವಜಾರೋಹಣ ನೆರವೇರಿಸಲಿದ್ದಾರೆ. ಸಂಜೆ 6 ಗಂಟೆಗೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಕಾರ್ಯದರ್ಶಿ ಎಂ. ಗುರುಸಿದ್ಧಸ್ವಾಮಿ ಅವರಿಂದ ಮೂಢನಂಬಿಕೆ ವಿರುದ್ಧ ವಿಜ್ಞಾನದ ಬೆಳಕು ಕಾರ್ಯಕ್ರಮ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಗ್ರಾ.ಪಂ. ಸದಸ್ಯರಾದ ದಂಡಿಗೆಪ್ಪ , ರೇಣುಕಮ್ಮ, ರೇಖಾ ಮತ್ತಿತರರು ಭಾಗವಹಿಸಲಿದ್ದಾರೆ.

## ತನ್ಮಯ್ ಕೆ. ಕಾಶಿಗೆ ಹ್ಯಾಂಡ್ಸಮ್ ಹಂಕ್ ಪ್ರಶಸ್ತಿ



ದಾವಣಗೆರೆ, ಜೂ.16- ನಗರದಲ್ಲಿ ಡೆಸ್ಟಿನಿ ಇವೆಂಟ್ಸ್ ಅವರು ಇತ್ತೀಚಿಗೆ ಆಯೋಜಿಸಿದ್ದ ರಾಜ್ಯಮಟ್ಟದ ಕಿಡ್ಸ್ ಫ್ಯಾಷನ್ ಫೆಸ್ಟ್-2024 ರ ಪ್ರಿನ್ಸ್ ಅಂಡ್ ಪ್ರಿನ್ಸೆಸ್ ಆಫ್ ದಾವಣಗೆರೆ ವಿಭಾಗದಲ್ಲಿ ಸ್ಪರ್ಧಿಸಿದ್ದ ಮಾನಸ ಹಾಗೂ ಕಾರ್ತಿಕ್ ಅವರ ಪುತ್ರ ತನ್ಮಯ್ ಕೆ. ಕಾಶಿಗೆ ಹ್ಯಾಂಡ್ಸಮ್ ಹಂಕ್ ಪ್ರಶಸ್ತಿ ಲಭಿಸಿದೆ.

## ಎಸ್ಸೆಸ್ : ಶುಭಾಶಯಗಳ ಮಹಾಪೂರ

(1ನೇ ಪುಟದಿಂದ) ಸೇರಿದಂತೆ ಮಹಾಸಭಾದ ಅನೇಕ ಪದಾಧಿಕಾರಿಗಳು, ಸಮಾಜ ಬಾಂಧವರು, ಆಂಧ್ರ ಪ್ರದೇಶ ಯಲ್ಲೂರು ಸಂಸದ ಮಹೇಶ್ ಕುಮಾರ್ ಯಾದವ್, ಹುಮನಾ ಬಾದ್‌ನ ಕಾಂಗ್ರೆಸ್ ಮುಖಂಡ ಅಭಿಷೇಕ್ ಮತ್ತಿತರರು ಶಿವಶಂಕರಪ್ಪ ಅವರ ನಿವಾಸಕ್ಕೆ ಆಗಮಿಸಿ, ಶುಭಾಶಯ ಸಲ್ಲಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿಜಯಕುಮಾರ್ ಸಂತೋಷ್, ಮಂಜುನಾಥ, ಅಪರ ಜಿಲ್ಲಾಧಿಕಾರಿ ಲೋಕೇಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್, ಉಪ ವಿಭಾಗಾಧಿಕಾರಿ ಶ್ರೀಮತಿ ಎನ್. ದುರ್ಗಾಶ್ರೀ ಸೇರಿದಂತೆ ಜಿಲ್ಲೆಯ ವಿವಿಧ ಇಲಾಖೆಗಳ ಅಧಿಕಾರಿಗಳು ಎಸ್ಸೆಸ್ ಅವರನ್ನು ಭೇಟಿ ಮಾಡಿ ಶುಭಾಶಯ ಸಲ್ಲಿಸಿದರು.

ಬಾಪೂಜಿ ವಿದ್ಯಾಸಂಸ್ಥೆಯ ಅಧ್ಯಕ್ಷ ಆರ್.ಎಲ್. ರಮಾನಂದ್, ಖಜಾಂಚಿ ನಿರಂಜನ್ ಹಾಗೂ ಆಡಳಿತ ಮಂಡಳಿ ಸದಸ್ಯರುಗಳು, ವಿದ್ಯಾಸಂಸ್ಥೆಯ ವಿವಿಧ ಶಾಲಾ-ಕಾಲೇಜುಗಳ ಮುಖ್ಯಸ್ಥರು ತಮ್ಮ ಸಿಬ್ಬಂದಿಗಳೊಂದಿಗೆ ಆಗಮಿಸಿ ಶುಭ ಕೋರಿದರು.

ಎಸ್ಸೆಸ್ ಅವರಿಗೆ ಶುಭಾಶಯ ಸಲ್ಲಿಸಲು ಆಗಮಿಸಿದ ಗಣ್ಯರನ್ನು ಸ್ವಾಗತಿಸಿ, ಬೀಳ್ಕೊಡುವಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ದಿನೇಶ್.ಕೆ.ಶೆಟ್ಟಿ, ಎಸ್.ಮಲ್ಲಿಕಾರ್ಜುನ್ ಮತ್ತಿತರರು ಮುತುವರ್ಜಿ ವಹಿಸಿದ್ದರು.


॥ ಶ್ರೀ ಹಂಪಿ ವಿರೂಪಾಕ್ಷೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ಜನನ : 01.01.1962, ನಿಧನ : 09.06.2024

ದಾವಣಗೆರೆ ತಾಲ್ಲೂಕು ಹೊಸ ಕಡ್ಲೇಬಾಳು ಗ್ರಾಮದ ವಾಸಿ **ಶ್ರೀಮತಿ ವನಜಾಕ್ಷಮ್ಮ ಮತ್ತು ಮಕ್ಕಳು** ಮಾಡುವ ವಿಜ್ಞಾಪನೆಗಳು. ದಿನಾಂಕ 09.6.2024ನೇ ಭಾನುವಾರ ಸಂಜೆ 4ಕ್ಕೆ ನನ್ನ ಪೂಜ್ಯ ಪತಿಯವರಾದ **ಶ್ರೀ ಹೋಟೆಲ್ ಉಮೇಶ್ ಎಸ್.ವಿ.** ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 17.06.2024ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ಹೊಸ ಕಡ್ಲೇಬಾಳು ಗ್ರಾಮ**, ದಾವಣಗೆರೆ ತಾ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

**ದುಃಖತಪ್ತರು : ಶ್ರೀಮತಿ ವನಜಾಕ್ಷಮ್ಮ ಮತ್ತು ಮಕ್ಕಳು ಹಾಗೂ ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಶ್ರೀಮತಿ ಸರೋಜಮ್ಮ ಶ್ರೀ ಬಸವರಾಜಪ್ಪ ಹುಗ್ಗಿ ಮತ್ತು ಮಕ್ಕಳು, ವಂಶಸ್ಥರು, ಹೊಸ ಕಡ್ಲೇಬಾಳು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

**ತೃತೀಯ ವರ್ಷದ ಪುಣ್ಯ ಸ್ಮರಣೆ**



**ದಾವಣಗೆರೆ ತಾಲ್ಲೂಕು ಹಳೇಬಾತಿ ವಾಸಿ, ಮಾಳಿಗೇರ ಶ್ರೀ ಎಂ.ಆರ್. ಶೇಖರಪ್ಪನವರ ಸಹೋದರರಾದ**

**ದಿ॥ ಶ್ರೀ ಹನುಮಂತಪ್ಪ ಎಂ.ಆರ್.**

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು ಸದಾ ನಿಮ್ಮ ಸ್ಮರಣೆ ಹಾಗೂ ನೆನಪಿನಲ್ಲಿರುವ **ಮಕ್ಕಳು, ತಮ್ಮಂದಿರು, ಸಹೋದರಿಯರು, ಅಳಿಯಂದಿರು, ಮಾವಂದಿರು, ಮಾಳಿಗೇರ ವಂಶಸ್ಥರು ಹಾಗೂ ಬಂಧು-ಮಿತ್ರರು, ಹಳೇಬಾತಿ.**

**ಮೊ : 94486 66848**


**ಭಾವಪೂರ್ಣ ಶ್ರದ್ಧಾಂಜಲಿ**



**ಹರಿಹರ ಚರಖಾ ಮತ್ತು ಗ್ರಾಮೋದ್ಯೋಗ ಸಹಕಾರ ಸಂಘ ನಿ. ದ** ಅಧ್ಯಕ್ಷರಾಗಿದ್ದ **ಕ್ಯಾತನಹಳ್ಳಿ ಬಸಪ್ಪ ಹನಗವಾಡಿ** (87 ವರ್ಷ) ಅವರು, ದಿನಾಂಕ 16.06.2024ರ ಭಾನುವಾರ ನಿಧನರಾಗಿದ್ದು, ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

**ಹರಿಹರ ಚರಖಾ ಮತ್ತು ಗ್ರಾಮೋದ್ಯೋಗ ಸಹಕಾರ ಸಂಘ ನಿ. ದಾವಣಗೆರೆ ಕಾರ್ಯದರ್ಶಿ ಹಾಗೂ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ, ನೂಲುವವರು ನೇಕಾರರು. ಮೊ : 94486 05589**

**ಪ್ರಥಮ ವರ್ಷದ ಪುಣ್ಯಸ್ಮರಣೆ**



**ದಿ. ಹೆಚ್.ಎಂ. ವಿಶ್ವನಾಥಯ್ಯ**
**(ವಕೀಲರು)**

ಪ್ರಥಮ ಪುಣ್ಯಸ್ಮರಣೆ ತತ್ಸಂಬಂಧ ದಾವಣಗೆರೆ, ಶಂಕರವಿಹಾರ ಬಡಾವಣೆ #1946 **'ರುದ್ರಾಕ್ಷ'** ಸ್ವಗೃಹದಲ್ಲಿ ಸೋಮವಾರ ಬೆಳಿಗ್ಗೆ 11.30ಕ್ಕೆ **ಪ್ರಥಮ ವರ್ಷದ ಪುಣ್ಯಸ್ಮರಣೆ**ಯನ್ನು ಹಮ್ಮಿಕೊಳ್ಳಲಾಗಿದೆ. ನೀವು ನಮ್ಮನ್ನಗಲಿ (17.6.2024) ಒಂದು ವರ್ಷವಾಯಿತು. ಸದಾ ನಿಮ್ಮ ಸ್ಮರಣೆಯಲ್ಲಿದ್ದು, ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ..

**ಧರ್ಮಪತ್ನಿ : ಶ್ರೀಮತಿ ಎನ್.ವಿ. ವಿಶಾಲಾಕ್ಷಿ**
**ಪುತ್ರ : ಶ್ರೀ ರವಿಕಿರಣ್ ಹಿರೇಮಠ**
**ಪುತ್ರಿಯರು : ಉಷಾಕಿರಣ್, ಆಶಾಕಿರಣ್**
**ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಮತ್ತು ಬಂಧು-ಮಿತ್ರರು.**
**ಮೊ : 98865 21348, 94489 17562**

# ಎಸ್.ಎಸ್. ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರ



ದಾವಣಗೆರೆ, ಜೂ. 16- ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಯೂ ಆಗಿರುವ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರ 94ನೇ ಜನ್ಮ ದಿನ ಹಾಗೂ ಜಾಗತಿಕ ರಕ್ತದಾನಿಗಳ ದಿನದ ಅಂಗವಾಗಿ ಎಸ್ಎಸ್ ವೈದ್ಯಕೀಯ ಕಾಲೇಜು ಹಾಗು ಆಸ್ಪತ್ರೆಯ ಬ್ಲಡ್ ಬ್ಯಾಂಕ್ ಸಹಯೋಗದೊಂದಿಗೆ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಯಾಗಿ ಶಾಮನೂರು ಶಿವಶಂಕರಪ್ಪ ಆಗಮಿಸಿದ್ದರು. ಈ ಸಂದರ್ಭದಲ್ಲಿ ಸಂಸ್ಥೆಯ ಪ್ರಾಂಶುಪಾಲ ಡಾ. ಬಿ.ಎಸ್ ಪ್ರಸಾದ್ ಮಾತನಾಡಿ, ಒಬ್ಬರ ಜೀವ ಉಳಿಸಲು ಇಂದು ವೈದ್ಯರೇ ಆಗಬೇಕಿಲ್ಲ ರಕ್ತದಾನ ಮಾಡಿದರೂ ಸಾಕು, ಅದರಿಂದ ಜೀವ ಉಳಿಸಬಹುದು ಎಂದು ಹೇಳಿದರು.

ಉಪ ಪ್ರಾಂಶುಪಾಲರಾದ ಡಾ. ಶಶಿಕಲಾ ಕೃಷ್ಣಮೂರ್ತಿ ಅವರು ರಕ್ತ ದಾನದಿಂದ ಆಗುವ ಲಾಭಗಳನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾ ಶ್ರೀಮತಿ ಕಿರುವಾಡಿ ಗಿರಿಜಮ್ಮ ಮೆಡಿಕಲ್ ಡೈರೆಕ್ಟರ್ ಡಾ. ಅರುಣಕುಮಾರ ಅಜ್ಜಪ್ಪ, ಸಂಸ್ಥೆಯ ಆಡಳಿತ ವ್ಯವಸ್ಥಾಪಕ ರವಿ, ಸಂಸ್ಥೆಯ ಎಲ್ಲ ಬೋಧಕ, ಬೋಧಕೇತರ ಸಿಬ್ಬಂದಿ, ಮತ್ತು ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಎಲ್ಲಾ ರಕ್ತ ದಾನಿಗಳಿಗೆ ಅಭಿನಂದನಾ ಪತ್ರ ವಿತರಿಸಲಾಯಿತು.

# ಸ್ವಾಸ್ಥ್ಯ ಸಮಾಜ ನಿರ್ಮಾಣದಲ್ಲಿ ಗೃಹರಕ್ಷಕರ ಪಾತ್ರ ದೊಡ್ಡದು

## ಗೃಹರಕ್ಷಕ ದಳದ ಪರಿಸರ ದಿನಾಚರಣೆಯಲ್ಲಿ ಉಪನ್ಯಾಸಕ ಹೆಚ್.ಮಲ್ಲಿಕಾರ್ಜುನ್



**ಹರಪನಹಳ್ಳಿ**

ಹರಪನಹಳ್ಳಿ, ಜೂ.16- ಸ್ವಾಸ್ಥ್ಯ ಸಮಾಜ ನಿರ್ಮಾಣದಲ್ಲಿ ಗೃಹರಕ್ಷಕ ದಳದ ಪಾತ್ರ ಮುಖ್ಯವಾಗಿದೆ. ಕಾನೂನು ರಕ್ಷಣೆಯ ಜೊತೆಗೆ ಪರಿಸರ ಸಂರಕ್ಷಣೆಯ ಹೊಣೆ ಹೊತ್ತಿರುವುದು ಅತ್ಯಂತ ಶ್ಲಾಘನೀಯ ಎಂದು ಎಸ್.ಯು.ಜೆ.ಎಂ. ಕಾಲೇಜಿನ ಕನ್ನಡ ಉಪನ್ಯಾಸಕ ಹೆಚ್. ಮಲ್ಲಿಕಾರ್ಜುನ್ ಅಭಿಪ್ರಾಯಪಟ್ಟರು.

ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಗೃಹರಕ್ಷಕ ದಳದ ವತಿಯಿಂದ ಏರ್ಪಡಿಸಿದ್ದ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಸಸಿಗಳನ್ನು ನೆಡುವುದರ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಪರಿಸರ ಸಂರಕ್ಷಣೆಯಲ್ಲಿ ಯುವಕರ ಪಾತ್ರ ಮುಖ್ಯವಾಗಿದೆ. ಯುವಕರು ಗೃಹರಕ್ಷಕ ದಳ ಸೇರಲು ಮುಂದೆ ಬರಬೇಕು. ಗೃಹರಕ್ಷಕ ದಳದ ಸಿಬ್ಬಂದಿ ಸಣ್ಣ ಪುಟ್ಟ ಕಾಯಕದ ಜೊತೆಗೆ ಕಾನೂನು ರಕ್ಷಣೆ, ದೇಶ ರಕ್ಷಣೆ ಮಾಡುವುದು, ಜೊತೆಗೆ ಪರಿಸರ ಸಂರಕ್ಷಣೆ ಮಾಡುತ್ತಿರುವುದು ತುಂಬಾ ಸಂತೋಷದಾಯಕ ವಿಚಾರ ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶಿಕ್ಷಕ ಬಿ.ಜಯ ಮಾಲತೇಶ ಮಾತನಾಡಿ, ಗೃಹರಕ್ಷಕ ದಳದ ಸೇವೆ ದೊಡ್ಡದು, ಅವರು ಆರ್ಥಿಕವಾಗಿ, ಸಾಮಾಜಿಕವಾಗಿ ಬಲಿಷ್ಠರಾಗಬೇಕು ಮತ್ತು ದುರಭ್ಯಾಸಗಳಿದ್ದಲ್ಲಿ ಬದಲಾಯಿಸಿಕೊಳ್ಳಬೇಕು ಎಂದರು.

ಜಿಲ್ಲಾ ಗೃಹರಕ್ಷಕ ದಳದ ಬೋಧಕ ಪ್ರಶಾಂತ ಪಾಟೀಲ್ ಮಾತನಾಡಿ, ವಾತಾವರಣದಲ್ಲಿ ತಾಪಮಾನ ಹೆಚ್ಚಾಗುತ್ತಿದ್ದು, ಹೀಗೆಯೇ ಮುಂದುವರೆದರೆ ಮುಂದಿನ ದಿನಗಳು ಕಷ್ಟಕರವಾಗಲಿವೆ. ಆದುದರಿಂದ ಪರಿಸರ ಸಂರಕ್ಷಿಸಲು ಗಿಡ ಬೆಳೆಸುವುದರ ಜೊತೆಗೆ ಪ್ಲಾಸ್ಟಿಕ್ ಬಳಕೆ ಮಾಡುವುದನ್ನು ನಿಲ್ಲಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಉಪನ್ಯಾಸಕ ಹೆಚ್. ಮಲ್ಲಿಕಾರ್ಜುನ, ವಿಜಯನಗರ ಜಿಲ್ಲಾ ಗೃಹ ರಕ್ಷಕದಳದ ಬೋಧಕ ಪ್ರಶಾಂತ ಪಾಟೀಲ್ ಮತ್ತು ಶಿಕ್ಷಕ ಬಿ.ಜಯಮಾಲತೇಶ ಇವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ವಾಗೀಶ್ ಪೂಜಾರ್, ಘಟಕಾಧಿಕಾರಿಗಳಾದ ಎಸ್.ಎಂ. ಮಲ್ಲಿಕಾರ್ಜುನಯ್ಯ, ಹಿರಿಯ ಅಧಿಕಾರಿಗಳಾದ ಪೂಜಾರ್ ವಾಗೀಶ್, ಎಂ.ಮಾಲತೇಶ, ಶಾನುಬೋಗರ ಹಾಲಸ್ವಾಮಿ, ಕೆ.ಸುಭಾಷ್, ಹೆಚ್. ಬಸವರಾಜ, ಹೆಚ್.ರಾಜಪ್ಪ, ಜಿ.ರಾಮಚಂದ್ರಪ್ಪ, ಕೆ.ಕೋಟೆಪ್ಪ, ಕ್ರೀಡಾಂಗಣದ ಸಿಬ್ಬಂದಿ ಮಂಜುನಾಥ ಮುಂತಾದವರು ಇದ್ದರು.

# ಕ್ಷೀಣಿಸುತ್ತಿರುವ ಸಾಂಸ್ಕೃತಿಕ ಚಟುವಟಿಕೆಗಳು

## 'ಸ್ವರಾಭರಣ' ಕಾರ್ಯಕ್ರಮದಲ್ಲಿ ಹಿರಿಯ ಕವಿ ಬಿ.ಆರ್. ಲಕ್ಷ್ಮಣರಾವ್ ಕಳವಳ



ದಾವಣಗೆರೆ, ಜೂ. 16-ವಾಣಿಜ್ಯ ಮತ್ತು ರಾಜಕೀಯ ನಗರಿಯಾಗಿರುವ ದಾವಣಗೆರೆಯಲ್ಲಿ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಕ್ಷೀಣಿಸುತ್ತಿವೆ ಎಂದು ನಾಡಿನ ಹಿರಿಯ ಕವಿ ಬಿ. ಆರ್. ಲಕ್ಷ್ಮಣರಾವ್ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ವಿನ್ನರ್ಸ್ ಅಕಾಡೆಮಿ ಸಭಾಂಗಣದಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ (ಬೆಂಗಳೂರು), ಅನುಶ್ರೀ ಸಂಗೀತ ಶಾಲೆ, ಕಲಾ ಕುಂಚ ಸಂಸ್ಥೆ (ದಾವಣಗೆರೆ) ಇವರ ಸಂಯುಕ್ತಾಶ್ರಯದಲ್ಲಿ ನಿನ್ನೆ ಹಮ್ಮಿಕೊಂಡಿದ್ದ 'ಸ್ವರಾಭರಣ' ಸ್ಥಳೀಯ ಕವಿಗಳ ಪದ್ಯ ಗಾಯನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾಹಿತ್ಯ, ಸಂಗೀತ ಸೇರಿದಂತೆ ಸಾಂಸ್ಕೃತಿಕ ಚಟುವಟಿಕೆಗಳು ಕಡಿಮೆಯಾಗುತ್ತಿದ್ದು, ಮಕ್ಕಳಿಗೆ ಚಿಕ್ಕಂದಿನಿಂದಲೇ ಕನ್ನಡಾಭಿಮಾನದ ಜೊತೆಗೆ ಸಾಹಿತ್ಯ, ಸಂಗೀತ, ಕಲೆ ಬಗ್ಗೆ ಆಸಕ್ತಿ ಮೂಡಿಸುವ ಅಗತ್ಯವಿದೆ ಎಂದರು.

ನಾನು ಸಾಹಿತ್ಯ ಕ್ಷೇತ್ರಕ್ಕೆ ಪಾದರ್ಪಣೆ ಮಾಡಲು ದಾವಣಗೆರೆ ಕಾರಣ. ನನಗೆ ಪ್ರಿಯವಾದ ಜಾಗ ಕೂಡ ಹೌದು. ಇಂತಹ ನಗರದಲ್ಲಿ ಕಲಾಕುಂಚದಂತಹ ಸಂಸ್ಥೆಗಳು ಸಾಹಿತ್ಯ, ಸಂಗೀತ, ಕಲೆ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಶಾಸ್ತ್ರೀಯ ಸಂಗೀತದ ತಳಹದಿಯ ಮೇಲೆ ಸುಗಮ ಸಂಗೀತ ಬಂದಿರುವಂತಹದ್ದು, ಅನುಶ್ರೀ ಸಂಗೀತ ಶಾಲೆ ಶಾಸ್ತ್ರೋಕ್ತವಾಗಿ ಸಂಗೀತವನ್ನು ಕಲಿಸುತ್ತಿರುವುದು ಸಂತೋಷದ ಸಂಗತಿ ಎಂದರು.

ಇದೇ ಸಂದರ್ಭದಲ್ಲಿ ಇತ್ತೀಚಿಗೆ ನಿಧನರಾದ ಜಾನಪದ ವಿದ್ವಾಂಸ ಡಾ.ಎಂ.ಜಿ. ಈಶ್ವರಪ್ಪ ಅವರು ಸಾಹಿತ್ಯ, ಸಂಗೀತ, ಕಲಾ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಲಕ್ಷ್ಮಣರಾವ್ ಸ್ಮರಿಸಿಕೊಂಡರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ನಾಡಿನ ಹಿರಿಯ ಚುಟುಕು ಕವಿ ಹೆಚ್.ಡುಂಡಿರಾಜ್ ಮಾತನಾಡಿ, ಕುವೆಂಪು, ಬೇಂದ್ರೆ, ಜಿ.ಎಸ್. ಶಿವರುದ್ರಪ್ಪ, ನಿಸಾರ್ ಅಹಮದ್ ಮುಂತಾದ ಹೆಸರಾಂತ ಕವಿಗಳ ಪದ್ಯಗಳಿಗೆ ರಾಗ ಸಂಯೋಜನೆ ಮಾಡಿ ಹಾಡುವ ವಾಡಿಕೆ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಇದರೊಟ್ಟಿಗೆ ಹೊಸ ಹೊಸ ಕವಿಗಳು, ಹೊಸ ಹೊಸ ಪದ್ಯಗಳಿಗೆ ರಾಗ ಸಂಯೋಜನೆ ಮಾಡಿ ಪ್ರಸ್ತುತಪಡಿಸುವ ಕೆಲಸ ಆಗಬೇಕಾಗಿದೆ ಎಂದರು.

ಇದೇ ಸಂದರ್ಭದಲ್ಲಿ ತಾವೇ ರಚಿಸಿರುವ 'ಹಾಲು ಮಾರುವ ಹುಡುಗಿ' ಪ್ರಥಮ ಪದ್ಯವನ್ನು ಪ್ರಸ್ತುತ ಪಡಿಸಿದ್ದು ವಿಶೇಷವಾಗಿತ್ತು. ಇದರೊಂದಿಗೆ 'ನಗದು' ಚುಟುಕು ಕವಿತೆ ಹೇಳಿದರು.

ಮಕ್ಕಳಿಗೆ ಇಷ್ಟವಾಗಿ ಹಾಡುವಂತಹ ಹೊಸ ಕವಿತೆಗಳು ಹೆಚ್ಚು ಹೆಚ್ಚು ಮೂಡಿ ಬರಲಿ ಎಂದು ಆಶಿಸಿದರು.

ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ಸಾಲಿಗ್ರಾಮ ಗಣೇಶ್ ಶೆಣೈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅನುಶ್ರೀ ಸಂಗೀತ ಪಾಠಶಾಲೆ ಸಂಸ್ಥಾಪಕರಾದ ಶ್ರೀಮತಿ ವೀಣಾ ಸದಾನಂದ ಹೆಗಡೆ, ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷೆ ಹೇಮಾ ಶಾಂತಪ್ಪ ಪೂಜಾರಿ, ವಿನ್ನರ್ಸ್ ಅಕಾಡೆಮಿ ಅಧ್ಯಕ್ಷ ಶಿವರಾಜ್ ಕಬ್ಬೂರು, ಕವಿ ಬಿ.ಎನ್. ಮಲ್ಲೇಶ್, ಕವಯತ್ರಿ ಶ್ರೀಮತಿ ಹೆಚ್.ಕೆ. ಸತ್ಯಭಾಮ ಮಂಜುನಾಥ್, ಹಿರಿಯ ಪತ್ರಕರ್ತ ಸದಾನಂದ ಹೆಗಡೆ, ಉಮೇಶ್ ಸೇರಿದಂತೆ ಅನೇಕರಿದ್ದರು.

# ಇಂಜಿನಿಯರಿಂಗ್ ಕಾಲೇಜು ಶುಲ್ಕ ಹೆಚ್ಚಳಕ್ಕೆ ಅನುಮತಿ : ಸರ್ಕಾರದ ಕ್ರಮಕ್ಕೆ ಎಐಡಿಎಸ್ಓ ಖಂಡನೆ

ದಾವಣಗೆರೆ, ಜೂ. 16- ಇಂಜಿನಿಯರಿಂಗ್ ಕಾಲೇಜುಗಳ ಶುಲ್ಕ ಹೆಚ್ಚಳಕ್ಕೆ ಅನುಮತಿ ನೀಡಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಎಐಡಿಎಸ್ಓ ಖಂಡಿಸಿದೆ.

ಖಾಸಗಿ ಕಾಲೇಜುಗಳ ಸರ್ಕಾರಿ ಕೋಟಾದಲ್ಲಿ 96.574 ರೂ ಗಳಿಂದ 1,06,231 ರೂ.ಗಳ ವರೆಗೆ ಶುಲ್ಕ ಏರಿಸಿದ್ದು, ಟೈಪ್-1 ಕಾಲೇಜುಗಳಲ್ಲಿ 1.69 ಲಕ್ಷ ರೂ.ಗಳಿಂದ 1.86ಲಕ್ಷ ರೂಗಳವರೆಗೆ ಹಾಗೂ ಟೈಪ್-2 ಕಾಲೇಜುಗಳಲ್ಲಿ 2.37 ಲಕ್ಷ ರೂಗಳಿಂದ 2.61 ಲಕ್ಷ ರೂ.ಗಳವರೆಗೆ ಶುಲ್ಕ ಏರಿಸಲಾಗಿದೆ ಎಐಡಿಎಸ್ಓ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಕಿಡಿಕಾರಿದ್ದಾರೆ.

ಈಗಾಗಲೇ ಯಾವುದೇ ಅಡೆ-ತಡೆ ಇಲ್ಲದೇ ಮ್ಯಾನೇಜ್ಮೆಂಟ್ ಕೋಟಾ ಅಡಿಯಲ್ಲಿ ಬರುವ ಶುಲ್ಕವನ್ನು ಮನಸೋಇಚ್ಛೆ ಖಾಸಗಿ ಕಾಲೇಜುಗಳು ಏರಿಸುತ್ತಿವೆ.

ಬೆಂಗಳೂರಿನ ಕಾಲೇಜು ಒಂದರಲ್ಲಿ ಮ್ಯಾನೇಜ್ಮೆಂಟ್ ಸೀಟಿನ ಶುಲ್ಕ 26 ಲಕ್ಷದಷ್ಟಿದೆ. ಇಂತಹ ಸಂದರ್ಭದಲ್ಲಿ ಸರ್ಕಾರದ ನಿಯಂತ್ರಣದ ಕೆಳಗೆ ಬರುವ ಶುಲ್ಕವನ್ನಾದರೂ ಏರಿಸದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕಿತ್ತು ಎಂದಿದ್ದಾರೆ.

ಈ ರೀತಿ ಪ್ರತಿ ವರ್ಷ ಶೈಕ್ಷಣಿಕ ಶುಲ್ಕ ಏರಿಕೆ, ಶಿಕ್ಷಣವನ್ನು ಸಂಪೂರ್ಣವಾಗಿ ವ್ಯಾಪಾರೀ ವಹಿವಾಟಿನಂತೆ ಮಾಡಲು ಸರ್ಕಾರವೇ ಅನುಮತಿ ನೀಡುತ್ತಿದೆ. ಇದು ಅತ್ಯಂತ ದುರದೃಷ್ಟಕರ. ಇದೀಗ, ಖಾಸಗಿ ಕಾಲೇಜುಗಳಲ್ಲಿ, ಇಂಜಿನಿಯರಿಂಗ್ ಶಿಕ್ಷಣ ಪಡೆಯುವುದು ಮಧ್ಯಮ ವರ್ಗದ ಕುಟುಂಬಗಳಿಗೆ ಮರೀಚಿಕೆಯಾಗಿದೆ.

ಪ್ರತೀ ವರ್ಷ ಶುಲ್ಕ ಏರಿಕೆ ನಡೆದರೆ, ಮುಂದಿನ ದಿನಗಳಲ್ಲಿ ಮಧ್ಯಮ ವರ್ಗದ ವಿದ್ಯಾರ್ಥಿಗಳು ಯಾರೂ ಸಹ, ಖಾಸಗಿ ಕಾಲೇಜುಗಳಲ್ಲಿ ಇಂಜಿನಿಯರಿಂಗ್ ಸೇರುವುದು ಸಾಧ್ಯವಾಗುವುದಿಲ್ಲ.

ಈಗಾಗಲೇ, ಖಾಸಗಿ ಅನುದಾನಿತ ಇಂಜಿನಿಯರಿಂಗ್ ಸೀಟುಗಳನ್ನು ಕಡಿಮೆ ಮಾಡುತ್ತಿರುವ ಸರ್ಕಾರ ಶುಲ್ಕ ಏರಿಕೆಯ ಒತ್ತಡಕ್ಕೆ ಮಣಿದಿರುವುದು ವಿದ್ಯಾರ್ಥಿ ವಿರೋಧಿ ನಡೆಯಾಗಿದೆ ಎಂದು ಹೇಳಿದ್ದಾರೆ.

ಈ ಕೂಡಲೇ, ರಾಜ್ಯ ಸರ್ಕಾರ ತನ್ನ ನಿರ್ಧಾರವನ್ನು ಹಿಂಪಡೆಯಬೇಕೆಂದು ಅಜಯ್ ಕಾಮತ್ ಆಗ್ರಹಿಸಿದ್ದಾರೆ.

# ಉನ್ನತ ಶಿಕ್ಷಣದ ಮೂಲಕ ಸಮರ್ಥ ಜೀವನ ರೂಪಿಸಿಕೊಳ್ಳಿ

## ದಾವಣಗೆರೆ ವಿವಿಯಲ್ಲಿನ ಯುವ ಜನೋತ್ಸವ ಕಾರ್ಯಕ್ರಮದಲ್ಲಿ ಡಾ. ಪ್ರಭಾ ವಿದ್ಯಾರ್ಥಿಗಳಿಗೆ ಕಿವಿಮಾತು



ದಾವಣಗೆರೆ, ಜೂ.16- ಭಾರತವನ್ನು 21ನೇ ಶತಮಾನದಲ್ಲಿ ಮುನ್ನಡೆಸಲು ಯುವಕರು ಶಕ್ತಿ ಕೇಂದ್ರವಾಗಿದ್ದು, ಉನ್ನತ ಶಿಕ್ಷಣದ ಮೂಲಕ ಸಮರ್ಥ ಜೀವನ ರೂಪಿಸಿಕೊಳ್ಳಬೇಕು. ಜೊತೆಗೆ ವಿದ್ಯಾರ್ಥಿಗಳು ತಮ್ಮ ಕೌಶಲ್ಯ ವೃದ್ಧಿಸಿಕೊಳ್ಳಬೇಕು ಎಂದು ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಕರೆ ನೀಡಿದರು.

ರಾಷ್ಟ್ರೀಯ ಸೇವಾ ಯೋಜನೆ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ (ಬೆಂಗಳೂರು) ಹಾಗೂ ದಾವಣಗೆರೆ ವಿಶ್ವವಿದ್ಯಾನಿಲಯದ ಸಹಯೋಗದ ವತಿಯಿಂದ ಶನಿವಾರ ವಿಶ್ವವಿದ್ಯಾನಿಲಯದ ಎಂಬಿಎ ಸಭಾಂಗಣದಲ್ಲಿ ಆಯೋಜಿಸಲಾದ ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ಮಟ್ಟದ ಯುವಜನೋತ್ಸವ - 2024 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ಎಂಬುದು ಕೇವಲ ಪಠ್ಯದ ಕಲಿಕೆಗೆ ಸೀಮಿತವಾಗಿಲ್ಲ. ಸಮಾಜದ ಎಲ್ಲಾ ಹಂತಗಳ ಪರಿಚಯಕ್ಕೆ ಶಿಕ್ಷಣ ಅಗತ್ಯವಾಗಿದೆ. ಕಲಿಕೆಯ ಜೊತೆಗೆ ಸಾಮಾಜಿಕ ಜವಾಬ್ದಾರಿ ತಿಳಿಸುವ ಮೌಲ್ಯಯುತ ಶಿಕ್ಷಣದ ಅನಿವಾರ್ಯತೆ ಪ್ರಸ್ತುತವಿದೆ. ವಿದ್ಯಾರ್ಥಿಗಳ ಜೀವನ ಬಿಳಿ ಹಾಳೆಯಂತೆ, ಉತ್ಕೃಷ್ಟ, ಆದರ್ಶ, ಮಾದರಿ ವಿಷಯಗಳನ್ನು ಬರೆದುಕೊಂಡು ಸಮರ್ಥ ಜೀವನ ರೂಪಿಸಿಕೊಳ್ಳಬೇಕು. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗಿಯಾಗುವುದರಿಂದ ವಿದ್ಯಾರ್ಥಿಗಳ ಶಾರೀರಿಕ ಹಾಗೂ ಮಾನಸಿಕ ದೃಢತೆಗೆ ಸಹಕಾರಿಯಾಗಲಿದೆ. ಇಂದಿನ ಶಾಲಾ - ಕಾಲೇಜುಗಳಲ್ಲಿ ಕ್ರೀಡಾಂಗಣಕ್ಕೆ ಮಕ್ಕಳನ್ನು ಕಳಿಸುವುದು ಅಗತ್ಯವಿದ್ದು, ಈ ನಿಟ್ಟಿನಲ್ಲಿ ಪೋಷಕರು ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಬಿ.ಡಿ.ಕುಂಬಾರ ಮಾತನಾಡಿ, ಅತ್ಯಂತ ವೇಗವಾಗಿ ಬೆಳೆಯುತ್ತಿರುವ ವಿಶ್ವವಿದ್ಯಾನಿಲಯ ಪಟ್ಟಿಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯವಿರುವುದು ಹೆಮ್ಮೆಯ ವಿಷಯ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಎನ್ಎಸ್ಎಸ್, ಎನ್‌ಸಿಸಿ ಹಾಗೂ ಸ್ಕೌಟ್ ಮತ್ತು ಗೈಡ್ ಕಾರ್ಯಕ್ರಮಗಳಿಗೆ ಹೆಚ್ಚು ಪ್ರೋತ್ಸಾಹ ನೀಡುತ್ತಿದೆ. ಇವುಗಳನ್ನು ವಿದ್ಯಾರ್ಥಿಗಳು ಸಮರ್ಥವಾಗಿ ಬಳಸಿಕೊಳ್ಳಬೇಕು.

ಮಹಾತ್ಮ ಗಾಂಧೀಜಿಯವರ ಗ್ರಾಮೀಣ ಅಭಿವೃದ್ಧಿ ಧ್ಯೇಯವನ್ನು ಸಮರ್ಥವಾಗಿ ನಿರ್ವಹಿಸಬೇಕು. ಜೀವನದ ಪ್ರತಿಯೊಂದು ಹಂತದಲ್ಲಿಯೂ ಇನ್ನೊಬ್ಬರ ಹಿತವನ್ನು ಬಯಸುವ, ಸಂಕಷ್ಟಕ್ಕೆ ನೆರವಾಗುವ ಮನೋಭಾವವನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು. ಮಾನವೀಯ ಮೌಲ್ಯಗಳನ್ನು ಒಳಗೊಂಡ ಮೌಲ್ಯಾಧಾರಿತ ಜೀವನವು ಸಾರ್ಥಕತೆ ಪಡೆಯುತ್ತದೆ. ವಿದ್ಯಾರ್ಥಿಗಳು ಶಿಬಿರದ ಮೂಲಕ ಸೌಹಾರ್ದಯುತ ಜೀವನವನ್ನು ಕಲಿಯುವ ಜೊತೆಗೆ ಸಮಾಜದ ವಿವಿಧ ಸ್ತರಗಳಲ್ಲಿರುವ ಜನರ ಜೀವನ ಮಟ್ಟ, ಅವರಲ್ಲಿರುವ ವಿಶಿಷ್ಟ ಗುಣಸ್ವಭಾವ, ಸಮಸ್ಯೆ ಗುರುತಿಸಿ, ಉತ್ತಮವಾದುದನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಚಲನಚಿತ್ರ ನಟ ನೀರ್ನಳ್ಳಿ ರಾಮಕೃಷ್ಣ, ಎನ್ಎಸ್ಎಸ್ ಪ್ರಾಂತೀಯ ನಿರ್ದೇಶಕ ಡಿ.ಕಾರ್ತಿಕೇಯನ್, ರಾಜ್ಯ ಎನ್ಎಸ್ಎಸ್ ಅಧಿಕಾರಿ ಡಾ.ಪ್ರತಾಪ್ ಲಿಂಗಯ್ಯ, ಎನ್ಎಸ್ಎಸ್ ಅಧಿಕಾರಿ ಉಪ್ಪಿನ್ ವೈ.ಎಂ, ಕುಲಸಚಿವ (ಪರೀಕ್ಷಾಂಗ) ಡಾ. ಸಿ.ಕೆ. ರಮೇಶ್, ಹಣಕಾಸು ಅಧಿಕಾರಿ ದ್ಯಾಮನಗೌಡ ಮುದ್ದನಗೌಡ್ರ, ದಾವಿವಿ ರಾಷ್ಟ್ರೀಯ ಸೇವಾ ಯೋಜನೆ ಸಂಯೋಜನಾಧಿಕಾರಿ ಡಾ.ಅಶೋಕ್ ಕುಮಾರ್ ಪಾಳೇದ ಮತ್ತು ಇತರರು ಉಪಸ್ಥಿತರಿದ್ದರು.



# ಹೊನ್ನಾಳಿ ತಾಲ್ಲೂಕು ಸೊರಟೂರು ಗ್ರಾ.ಪಂ ಅಧ್ಯಕ್ಷರಾಗಿ ಪರಶುರಾಮ್ ಆಯ್ಕೆ

ಹೊನ್ನಾಳಿ, ಜೂ.16- ತಾಲ್ಲೂಕಿನ ಸೊರಟೂರು ಗ್ರಾ.ಪಂ ಅಧ್ಯಕ್ಷರಾಗಿ ಎಂ.ಹೆಚ್. ಪರಶುರಾಮ್ ಇವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಡಾ. ವಿಶ್ವನಟೇಶ್ ಘೋಷಿಸಿದರು. ಹಿಂದಿನ ಅಧ್ಯಕ್ಷರಾಗಿದ್ದ ಜಿ.ಬಸವನಗೌಡ ಪಾಟೀಲ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಬೇರೆ ಸದಸ್ಯರು ಯಾರೂ ನಾಮಪತ್ರ ಸಲ್ಲಿಸದೇ ಇರುವುದರಿಂದ ಪರಶುರಾಮ್ ಅಧ್ಯಕ್ಷರಾಗಿ ಆಯ್ಕೆಯಾದರು.

ಚುನಾವಣಾ ಪ್ರಕ್ರಿಯೆಯಲ್ಲಿ ಗ್ರಾ.ಪಂ ಮಾಜಿ ಅಧ್ಯಕ್ಷ ಜಿ.ಬಸವನಗೌಡ ಪಾಟೀಲ್, ಉಪಾಧ್ಯಕ್ಷೆ ರಾಧಮ್ಮ, ಸದಸ್ಯರಾದ ವಿರೂಪಾಕ್ಷಪ್ಪ, ಹನುಮಂತಪ್ಪ, ಮರಿಯಪ್ಪ, ರಾಧಮ್ಮ, ನಾಗರತ್ನಬಾಯಿ, ಕೆಂಚಮ್ಮ, ರಂಜಿತಾ, ಸುಮಾ, ಪಿಡಿಓ ಎನ್.ನಾಗರಾಜ್, ಕಾರ್ಯದರ್ಶಿ ಹಳದಪ್ಪ ಗ್ರಾಮದ ಮುಖಂಡರಾದ ಪಿ.ಸಿ.ಸತೀಶ್, ಹನುಮಪ್ಪಗೌಡ, ಎನ್. ನಾಗೇಶ್‌ರಾವ್, ಪಿ.ಪರಮೇಶ್ವರಪ್ಪ, ಎ.ವಾಸು ದೇವಾಚಾರಿ ಮತ್ತಿತರರು ಉಪಸ್ಥಿತರಿದ್ದರು.

# 20ರಂದು ಅಂಚೆ ವಿಭಾಗೀಯ ಡಾಕ್ ಅದಾಲತ್

ದಾವಣಗೆರೆ ಜೂ.16 - ದಾವಣಗೆರೆ ಅಂಚೆ ವಿಭಾಗೀಯ ಡಾಕ್-ಅದಾಲತ್ತನ್ನು ಇದೇ ದಿನಾಂಕ 20 ರಂದು ಮಧ್ಯಾಹ್ನ 4 ಕ್ಕೆ ನಗರದ ಪ್ರಧಾನ ಅಂಚೆ ಕಚೇರಿಯ ಮೊದಲನೇ ಮಹಡಿಯ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ನಡೆಸಲಾಗುತ್ತದೆ. ಸಾರ್ವಜನಿಕರು ಮತ್ತು ಅಂಚೆ ಗ್ರಾಹಕರು ಅಂಚೆ ಸೇವೆಗಳಿಗೆ ಸಂಬಂಧಿಸಿದ ದೂರುಗಳನ್ನು ಮತ್ತು ಸಲಹೆಗಳನ್ನು ಇದೇ ದಿನಾಂಕ 20 ರಂದು ಅಥವಾ ಅದಕ್ಕಿಂತ ಮುಂಚಿತವಾಗಿ ಅಂಚೆ ಅಧೀಕ್ಷಕರ ಕಚೇರಿಗೆ ಸಲ್ಲಿಸಬೇಕೆಂದು ಅಂಚೆ ಚಂದ್ರಶೇಖರ್ ತಿಳಿಸಿದ್ದಾರೆ.

# ಸಾಮಾಜಿಕ ಜಾಲತಾಣವನ್ನು ಬಳಸುವಾಗ ಜಾಗರೂಕರಾಗಿರಿ : ಎಸ್ಪಿ ಉಮಾ ಪ್ರಶಾಂತ್



ದಾವಣಗೆರೆ, ಜೂ. 16- ನಗರದ ಜಿಎಂ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ವಿಭಾಗದಿಂದ ಯುವ ಸಬಲೀಕರಣ ವಿಚಾರ ಸಂಕಿರಣವನ್ನು ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದಾವಣಗೆರೆ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣಗಳನ್ನು ಅಥವಾ ಮಾಧ್ಯಮಗಳನ್ನು ಬಳಸುವಾಗ ಬಹಳ ಎಚ್ಚರಿಕೆಯಿಂದ ಜಾಗರೂಕತೆಯಿಂದ ಇರಬೇಕೆಂದು ಕಿವಿಮಾತು ಹೇಳಿದರು. ಯಾವುದೇ ಅಹಿತಕರ ಘಟನೆಗಳಲ್ಲಿ ಪಾಲ್ಗೊಳ್ಳದೇ ನಿಮ್ಮ ಭವಿಷ್ಯವನ್ನು ಉಜ್ವಲವಾಗಿ ರೂಪಿಸಿಕೊಳ್ಳಬೇಕೆಂದು ತಿಳಿಸಿದರು.

ಮತ್ತೋರ್ವ ಅತಿಥಿಯಾಗಿದ್ದ ಡಾ. ಸುಭಾಷ್ ಚಂದ್ರನ್ ವಿದ್ಯಾರ್ಥಿಗಳಿಗೆ ಯುವ ಸಬಲೀಕರಣ ಮತ್ತು ಜಾಗರೂಕ ನಾಗರಿಕ ಎಂಬ ವಿಷಯದ ಬಗ್ಗೆ ವಿದ್ಯಾರ್ಥಿಗಳಿಗೆ ವಿಚಾರ ಸಂಕೀರಣವನ್ನು ನಡೆಸಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಎಂ.ಬಿ. ಸಂಜಯ್ ಪಾಂಡೆ ಎಲ್ಲಾ ವಿದ್ಯಾರ್ಥಿಗಳಿಗೂ ಅವರ ಮುಂದಿನ ಭವಿಷ್ಯಕ್ಕೆ ಶುಭ ಹಾರೈಸಿದರು.

ಕಾರ್ಯಕ್ರಮದ ಉಸ್ತುವಾರಿಯನ್ನು ವಹಿಸಿದ್ದ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥೆ ಡಾ.ಯು.ಎಂ. ನೇತ್ರಾವತಿ ಎಲ್ಲಾ ಅತಿಥಿಗಳಿಗೂ ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ತರಬೇತಿ ಮತ್ತು ಉದ್ಯೋಗ ವಿಭಾಗದ ನಿರ್ದೇಶಕ ಪ್ರೊ. ಟಿ. ಆರ್. ತೇಜಸ್ವಿ ಕಟ್ಟಿಮನಿ, ಕಾರ್ಯಕ್ರಮದ ಸಂಯೋಜಕರುಗಳಾದ ಪ್ರೊ. ಎ.ಬಿ. ಯಶಸ್ವಿನಿ ಪಟೇಲ್ ಮತ್ತು ಪ್ರೊ. ಜಿ.ಆರ್. ಕಾವ್ಯ ಮತ್ತು ಇತರರು ಪಾಲ್ಗೊಂಡಿದ್ದರು.

# ಅಂಬೇಡ್ಕರ್, ವಾಜಪೇಯಿ ವಸತಿ ಯೋಜನೆಯಡಿ ಫಲಾನುಭವಿಗಳಿಂದ ಅರ್ಜಿ

ದಾವಣಗೆರೆ, ಜೂ. 16 - ದಾವಣಗೆರೆ ಪಾಲಿಕೆ ವ್ಯಾಪ್ತಿಯ ಉತ್ತರ ಮತ್ತು ದಕ್ಷಿಣ ಕ್ಷೇತ್ರದಲ್ಲಿನ ಸಾರ್ವಜನಿಕರ ಶಿಥಿಲಗೊಂಡಿರುವ ಮನೆಗಳು ಹಾಗೂ ಖಾಲಿ ನಿವೇಶನ ಹೊಂದಿರುವ ನಿವಾಸಿಗಳಿಗೆ ಡಾ. ಬಿ.ಆರ್.ಅಂಬೇಡ್ಕರ್, ವಾಜಪೇಯಿ ವಸತಿ ಯೋಜನೆಯಡಿಯಲ್ಲಿ ಮನೆ ಕಟ್ಟಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಅಲ್ಪಸಂಖ್ಯಾತರ 50, ಸಾಮಾನ್ಯ 329 ಸೇರಿ ಒಟ್ಟು 379 ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ 86, ಪರಿಶಿಷ್ಟ ಪಂಗಡ 35, ಒಟ್ಟು 500 ಹೆಚ್ಚುವರಿಯಾಗಿ ನಿಗದಿಪಡಿಸಲಾಗಿದ್ದು, ಮನೆ ನಿರ್ಮಿಸಿಕೊಳ್ಳುವ ಫಲಾನುಭವಿಗಳನ್ನು ಆಯ್ಕೆ ಮಾಡಲು ಅವಕಾಶವಿರುತ್ತದೆ.

ಆಸಕ್ತಿಯುಳ್ಳ ಫಲಾನುಭವಿಗಳು ತಮ್ಮ ಆಧಾರ್ ಕಾರ್ಡ್ (ಗಂಡ ಮತ್ತು ಹೆಂಡತಿ), ರೇಷನ್ ಕಾರ್ಡ್, ಮತದಾರರ ಗುರುತಿನ ಚೀಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಬ್ಯಾಂಕ್ ಪಾಸ್ ಪುಸ್ತಕ, ಚಾಲ್ತಿ ಸಾಲಿನ ಇ-ಸ್ವತ್ತು, ಇ.ಸಿ., ನಕಲು ಪ್ರತಿ ಮತ್ತು 2 ಭಾವಚಿತ್ರ ಹಾಗೂ ಅರ್ಜಿಯೊಂದಿಗೆ ಪ್ರಕಟಣೆ ಹೊರಡಿಸಿದ 30 ದಿನದೊಳಗಾಗಿ ಪಾಲಿಕೆ ಕಚೇರಿಗೆ ಸಲ್ಲಿಸಲು ಆಯುಕ್ತರಾದ ಶ್ರೀಮತಿ ರೇಣುಕಾ ತಿಳಿಸಿದ್ದಾರೆ.

# ಸಮವಸ್ತ್ರ ವೃತ್ತಿಯ ವಿವಿಧ ಹುದ್ದೆಗಳಿಗೆ ಸೇರಬಯಸುವ ಅಭ್ಯರ್ಥಿಗಳಿಗೆ ತರಬೇತಿ

ದಾವಣಗೆರೆ, ಜೂ.16- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪ್ರಸಕ್ತ ಸಾಲಿಗೆ ಭಾರತೀಯ ಸೇನೆ ಸೇರಿದಂತೆ ಇತರೆ ಸಮವಸ್ತ್ರ ಸೇವೆಗಳಿಗೆ ಸೇರ ಬಯಸುವ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ - 1, 2 (ಎ), 3 (ಎ), 3 (ಬಿ) ಅಭ್ಯರ್ಥಿಗಳಿಗೆ ಆಯ್ಕೆಯ ಪೂರ್ವಸಿದ್ಧತೆ ಬಗ್ಗೆ ವೃತ್ತಿ ಮಾರ್ಗದರ್ಶನ ಹಾಗೂ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತದೆ.

ತರಬೇತಿಗಾಗಿ ಅರ್ಜಿ ಸಲ್ಲಿಸಲು ಜುಲೈ 10 ಕೊನೆಯ ದಿನವಾಗಿರುತ್ತದೆ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಯನ್ನು ಇಲಾಖಾ https://bcwd.karnataka.gov.in ನಿಂದ ಪಡೆಯಬಹುದು.

ದಕ್ಷಿಣ ಕನ್ನಡ ಜಿಲ್ಲೆ - ದೂ.ಸಂ. 0824-2225078, ಉಡುಪಿ ಜಿಲ್ಲೆ - 0820-2574881, ಉತ್ತರ ಕನ್ನಡ ಜಿಲ್ಲೆ - ದೂ.ಸಂ : 08382-226589 ನ್ನು ಸಂಪರ್ಕಿಸಬಹುದೆಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ತಿಳಿಸಿದ್ದಾರೆ.

**TO LET (RENT)**

**Brand New Commercial Complex**
Location : # 644, Sri Durga Krupa,
60 feet Road, Nittuvalli,
DAVANGERE-577 004.

* Total Area - 20,000 sqft
* Basement - 3900 sqft,
* Ground Floor - 3900 sqft
* First floor - 3900 sqft
* Second floor - 3900 sqft
* Third floor - 3900 sqft

Amenity :
1) Elevator (lift) 2) Backup Power

Contact : 9036302031, 9036612091

# ಆಣೂರು ಭರಮದೇವರ ಗುಡ್ಡದಲ್ಲಿ ಬೀಜದುಂಡೆ ಎಸೆದು ಸಂಭ್ರಮಿಸಿದ ವಿದ್ಯಾರ್ಥಿಗಳು



ರಾಣೇಬೆನ್ನೂರು,ಜೂ.16- ಬ್ಯಾಡಗಿ ತಾಲ್ಲೂಕು ಆಣೂರು ಗ್ರಾಮದಲ್ಲಿ ಜೈವಿಕ ಇಂಧನ ಯೋಜನೆ ಕುರಿತು ಅರಿವು ಮೂಡಿಸುವ ಜಾಥಾ ಹಮ್ಮಿಕೊಳ್ಳುವ ಮೂಲಕ 'ವಿಶ್ವ ಪರಿಸರ' ದಿನಾಚರಣೆಯನ್ನು ಆಚರಿಸಲಾಯಿತು.

ಎಸ್.ಬಿ.ಎಚ್. ಪ್ರೌಢಶಾಲೆ, ಹಾವೇರಿ ಜಿಲ್ಲಾ ಮುಂದಾಳು ಸಂಸ್ಥೆ, ನವೋದಯ ಶಿಕ್ಷಣ ಮತ್ತು ಪರಿಸರ ಅಭಿವೃದ್ಧಿ ಸೇವಾ ಸಂಸ್ಥೆ (ನೀಡ್ಸ್ - ರಾಣೇಬೆನ್ನೂರು) ಹಾಗೂ ಜಿಲ್ಲಾ ಜೈವಿಕ ಇಂಧನ ಮಾಹಿತಿ ಮತ್ತು ಪ್ರಾತ್ಯಕ್ಷಿಕೆ ಕೇಂದ್ರ (ಹನುಮನಮಟ್ಟಿ), ಸುಜಲಾನ್ ಫೌಂಡೇಶನ್ (ಪುಣೆ) ಹಾಗೂ ಸಾಮಾಜಿಕ ಅರಣ್ಯ ಇಲಾಖೆ (ಬ್ಯಾಡಗಿ) ಇವರ ಸಹಯೋಗದೊಂದಿಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮುಖ್ಯೋಪಾಧ್ಯಾಯ ಎಚ್. ಎನ್. ಕಳ್ಳಿಮನಿ ಪ್ರಾಸ್ತಾವಿಕವಾಗಿ ಮಾತನಾಡಿ, ನೀಡ್ಸ್ ಸಂಸ್ಥೆಯವರು ನಮ್ಮ ಶಾಲೆಯ ಮಕ್ಕಳಿಗೆ ವಿವಿಧ ಜೈವಿಕ ಇಂಧನ ಹಾಗೂ ತೋಟಗಾರಿಕೆಯ ಒಟ್ಟು 8,000ಕ್ಕೂ ಅಧಿಕ ಬೀಜಗಳನ್ನು ನೀಡಿ, ಅವುಗಳನ್ನು ಮಣ್ಣಿನೊಂದಿಗೆ ಬೆರೆಸಿ ಉಂಡಿಯನ್ನು ಮಾಡಿ, ತಮ್ಮ ತಮ್ಮ ಮನೆಗಳ ನೆರಳಿನಲ್ಲಿ ಒಣಗಿಸಲು ತಿಳಿಸಿದ್ದರು. ಅದೇ ರೀತಿ ಇಂದು ಆಣೂರು ಗ್ರಾಮದ ಭರಮದೇವರ ಗುಡ್ಡದಲ್ಲಿ ಶಾಲೆಯ ಮಕ್ಕಳಿಂದ ತಯಾರಿಸಿದ ಬೀಜದುಂಡೆಗಳನ್ನು ಎಸೆಯ ಲಾಯಿತು. ಹೀಗೆ ಎಸೆದ ಬೀಜಗಳು ಮುಂದಿನ ದಿನಗಳಲ್ಲಿ ಮೊಳಕೆಯೊಡೆದು ಗಿಡಗಳಾಗಿ ಪರಿವರ್ತನೆಗೊಳ್ಳುತ್ತವೆ ಎಂದು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನೀಡ್ಸ್ ಸಂಸ್ಥೆಯ ಸಿ.ಇ.ಓ ಎಚ್. ಎಫ್ ಅಕ್ಕಿ ಮಾತನಾಡಿ, ಜೈವಿಕ ಇಂಧನ ಭವಿಷ್ಯದ ಇಂಧನವಾಗಿದ್ದು, ನಾವು ಬಳಸುತ್ತಿರುವ ಪೆಟ್ರೋಲ್, ಡೀಸೆಲ್ ಮುಗಿದುಹೋಗುವ ಸಂಪನ್ಮೂಲವಾಗಿದ್ದು, ಇದರ ಬಳಕೆಯಿಂದಾಗಿ ಜಾಗತಿಕ ತಾಪಮಾನ ಹೆಚ್ಚುತ್ತಿದ್ದು, ಮನುಕುಲ ಹಾಗೂ ಜೀವರಾಶಿಗಳ ಮೇಲೆ ವ್ಯತಿರಿಕ್ತ ಪರಿಣಾಮವನ್ನುಂಟು ಮಾಡುತ್ತಿದೆ. ಆದ್ದರಿಂದ ಹಸಿರು ಇಂಧನ ಅಥವಾ ಜೈವಿಕ ಇಂಧನ ಅನಿವಾರ್ಯವಾಗಿದೆ. ಈ ಜೈವಿಕ ಇಂಧನ ಸಂಪನ್ಮೂಲಗೊಳಿಸಲು ಪ್ರತಿಯೊಬ್ಬ ನಾಗರಿಕರು ಜೈವಿಕ ಇಂಧನ ಗಿಡಗಳಾದ ಹೊಂಗೆ, ಬೇವು, ನಾಗಸಂಪಿಗೆ, ಸೀಮರೂಬಾ ಹಾಗೂ ಇತರೆ ಗಿಡಗಳನ್ನು ನೆಡುವುದರೊಂದಿಗೆ ಪಾಲನೆ, ಪೋಷಣೆಯನ್ನು ಮಾಡಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಾಮಾಜಿಕ ಅರಣ್ಯ ಇಲಾಖೆಯ ಅರಣ್ಯಾಧಿಕಾರಿಗಳಾದ ಚಮನ್‌ಸಾಬ ಎಂ. ಬಿಲ್ಲಳ್ಳಿ, ಜಗದೀಶ್ ದ್ಯುಟರ್ ಹಾಗೂ ಇಲಾಖಾ ಸಿಬ್ಬಂದಿ ವರ್ಗ, ಸುಜಲಾನ್ ಫೌಂಡೇಶನ್ ಇಂಜಿನಿಯರ್ ಚಿರಂಜೀವಿ, ಸತ್ಯೇಂದ್ರ, ಮಂಜುನಾಥ, ಸಲೀಮ್, ನೀಡ್ಸ್ ಸಂಸ್ಥೆಯ ಜಿಲ್ಲಾ ಸಂಯೋಜಕ ತಿಪ್ಪೇಶಪ್ಪ ಕನ್ನಮ್ಮನವರ್, ಜೈವಿಕ ಇಂಧನ ಯೋಜನಾ ಸಹಾಯಕಿ ಪ್ರಿಯಾಂಕ ಹಾಗೂ ಇತರರು ಭಾಗವಹಿಸಿದ್ದರು.

# ಶಾಂತಿ, ಸೌಹಾರ್ದಯುತವಾಗಿ ಬಕ್ರೀದ್ ಆಚರಿಸಿ



**ಮಲೇಬೆನ್ನೂರು : ಶಾಂತಿ ಸಭೆಯಲ್ಲಿ ಪಿಎಸ್‌ಐ ಪ್ರಭು ಮನವಿ**

ಮಲೇಬೆನ್ನೂರು, ಜೂ.16- ನಾಳೆ ಸೋಮವಾರ ಜರುಗುವ ಬಕ್ರೀದ್ ಹಬ್ಬವನ್ನು ಶಾಂತಿಯುತವಾಗಿ, ಸೌಹಾರ್ದಯುತವಾಗಿ ಕಾನೂನಿನ ಚೌಕಟ್ಟಿನಲ್ಲಿ ಆಚರಿಸಿ ಎಂದು ಪಿಎಸ್‌ಐ ಪ್ರಭು ಕೆಳಗಿನಮನಿ ಪಟ್ಟಣದ ಮುಸ್ಲಿಂ ಜನತೆಗೆ ಮನವಿ ಮಾಡಿದರು.

ಅವರು ಇಲ್ಲಿನ ಪೊಲೀಸ್ ಠಾಣೆಯಲ್ಲಿ ಬಕ್ರೀದ್ ಹಬ್ಬದ ಅಂಗವಾಗಿ ಮಂಗಳವಾರ ಹಮ್ಮಿಕೊಂಡಿದ್ದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರಾರ್ಥನಾ ಸಭೆ, ಮೆರವಣಿಗೆ ವೇಳೆ ಪೊಲೀಸ್ ಇಲಾಖೆ ಭದ್ರತೆ ಒದಗಿಸುತ್ತದೆ. ಪ್ರಾಣಿಬಲಿ ನೀಡಬಾರದು, ಸಂಚಾರ ವ್ಯವಸ್ಥೆಗೆ ಧಕ್ಕೆ ಆಗದಂತೆ ಎಚ್ಚರ ವಹಿಸಿ ಎಂದರು.

ದ್ವಿಚಕ್ರ ವಾಹನದಲ್ಲಿ 3 ಜನರು ಸಾಗುವುದು, ಸ್ವಚ್ಛತೆ ಪಾಲಿಸದಿರುವುದು, ಸಾಮಾಜಿಕ ಜಾಲತಾಣದಲ್ಲಿ ಕುಚೋದ್ಯದ ಸಂದೇಶ ರವಾನಿಸಿದರೆ, ಶಾಂತಿ ಕದಡಿದರೆ, ಕಾನೂನು ರೀತ್ಯಾ ಕ್ರಮ ಜರುಗಿಸುವ ಎಚ್ಚರಿಕೆಯನ್ನು ಪಿಎಸ್‌ಐ ಪ್ರಭು ನೀಡಿದರು.

ಮುಸ್ಲಿಂ ಸಮಾಜದ ಮುಖಂಡ ಸೈಯದ್ ಜಾಕೀರ್, ಪುರಸಭೆ ಸದಸ್ಯ ದಾದಾಪೀರ್, ನಯಾಜ್ ಮಾತನಾಡಿ, ತ್ಯಾಗ - ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು 3 ದಿನ ಆಚರಣೆ ಮಾಡಲಾಗುವುದು. ಪ್ರಾರ್ಥನಾ ಸಭೆ, ಮೆರವಣಿಗೆ ವೇಳೆ ಸ್ವಯಂ ಸೇವಕರನ್ನು ನಿಯೋಜಿಸಲಾಗುವುದು. ಸ್ವಚ್ಛತೆ, ಶಾಂತಿ ಕಾಪಾಡುವ ಭರವಸೆ ನೀಡಿದರು.

ಪಿಎಸ್‌ಐ ಮಹಾದೇವ್, ಭಾನುವಳ್ಳಿ ಮುಸ್ಲಿಂ ಸಮಾಜದ ಮುಖಂಡ ಹಜರತ್ ಅಲಿ ಮಾತನಾಡಿದರು.

ಇಕ್ಬಾಲ್ ಸಾಬ್, ಪುರಸಭೆ ಸದಸ್ಯ ಶಬ್ಬೀರ್, ಜಮೀರ್ ಪಾಷಾ, ಅನ್ವರ್ ಭಾಷಾ ಗೌಸ್‌ಪೀರ್, ಶಾಕೀರ್, ಅನ್ವರ್ ಭಾಷಾ, ವಿವಿಧ ಮಸೀದಿಗಳ ಮುತುವಲಿಗಳು, ಭಾನುವಳ್ಳಿ, ಕಡರನಾಯಕನಹಳ್ಳಿ, ಮಲ್ಲನಾಯಕನಹಳ್ಳಿ, ಗೋವಿನಹಾಳು ಗ್ರಾಮದ ಮುಸ್ಲಿಂ ಸಮಾಜದ ಮುಖಂಡರು ಸಭೆಯಲ್ಲಿದ್ದರು.ಎಎಸ್‌ಐ ಶ್ರೀನಿವಾಸ್ ಸ್ವಾಗತಿಸಿ, ವಂದಿಸಿದರು.

# ಇಳಕಲ್ ಶ್ರೀಮಠಕ್ಕೆ ಕಂಚಿಕೇರಿ ಶ್ರೀಗಳ ಭೇಟಿ



ದಾವಣಗೆರೆ, ಜೂ.16- ಚಿತ್ತರಗಿ ಇಳಕಲ್ ಶ್ರೀಮಠಕ್ಕೆ ಕಂಚಿಕೇರಿ ಶ್ರೀ ಕ್ಷೇತ್ರ ಬಿದ್ದಹನುಮಪ್ಪನಟ್ಟಿ ಶ್ರೀ ಬಸವರಾಜ ಗುರೂಜಿಯವರು ಭೇಟಿ ಕೊಟ್ಟು, ಪೂಜ್ಯರೊಂದಿಗೆ ಉಭಯ ಕುಶಲೋಪರಿ ನಡೆಸಿದರು. ನಂತರ ಗುರು ಮಹಾಂತ ಅಪ್ಪಗಳವರಿಗೆ ಶಾಲು ಹೊದಿಸಿ ಫಲ-ಪುಷ್ಪಗಳೊಂದಿಗೆ ಸನ್ಮಾನಿಸಿದರು.

# ಪರಿಶಿಷ್ಟ ಪಂಗಡದ ಕಾನೂನು ಪದವೀಧರರ ವೃತ್ತಿ ತರಬೇತಿ ಅರ್ಜಿ

ದಾವಣಗೆರೆ, ಜೂ.16- ಆಡ ಳಿತ ನ್ಯಾಯಾಧೀಕರಣದಲ್ಲಿ ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ವೃತ್ತಿ ಕಾನೂನು ತರಬೇತಿ ನೀಡಲು ಕಾನೂನು ಪದವಿ ಹೊಂದಿದ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ದಾವಣಗೆರೆ ಜಿಲ್ಲೆಗೆ 8 ಗುರಿ ನಿಗಧಿಪಡಿಸಲಾಗಿದ್ದು, ಇಲಾಖೆಯ ವೆಬ್ ಸೈಟ್ www.tw.kar.nic.in ಮೂಲಕ ಇದೇ ದಿನಾಂಕ 18 ರಿಂದ 31 ರವರೆಗೆ ಅರ್ಜಿ ಸಲ್ಲಿಸಿ, ಸಲ್ಲಿಸಿದ ಮೂಲ ಪ್ರತಿಯೊಂದಿಗೆ ಸಂಬಂಧಿಸಿದ ದಾಖಲೆಗಳನ್ನು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಗಳ ಕಚೇರಿ, ಕೊಠಡಿ ಸಂಖ್ಯೆ : 45, ಜಿಲ್ಲಾಡಳಿತ ಭವನ, ದಾವಣಗೆರೆ ಇಲ್ಲಿಗೆ ಸಲ್ಲಿಸಲು ತಿಳಿಸಲಾಗಿದೆ.

# ಚಿತ್ರದುರ್ಗದ ರೇಣುಕಸ್ವಾಮಿ ಮನೆಗೆ ಶ್ರೀ ರಂಭಾಪುರಿ ಜಗದ್ಗುರುಗಳ ಭೇಟಿ



ಚಿತ್ರದುರ್ಗ, ಜೂ. 16- ಹತ್ಯೆಯಾಗಿರುವ ರೇಣುಕಸ್ವಾಮಿ ಅವರ ಮನೆಗೆ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಇಂದು ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

ಈ ಸಂದರ್ಭದಲ್ಲಿ ಭೇಟಿಯಾದ ಮಾಧ್ಯಮದವರೊಂದಿಗೆ ಮಾತನಾಡಿದ ಜಗದ್ಗುರುಗಳು, ಕುಟುಂಬಕ್ಕೆ ಆಧಾರ ಸ್ತಂಭವಾಗಿದ್ದ ರೇಣುಕಸ್ವಾಮಿ ಕುಟುಂಬಕ್ಕೆ ಸರ್ಕಾರ ಆರ್ಥಿಕ ನೆರವು ನೀಡಬೇಕು. ಜೊತೆಗೆ ಆತನ ಪತ್ನಿಗೆ ಸರ್ಕಾರಿ ಉದ್ಯೋಗ ನೀಡಬೇಕು. ಗೃಹ ಸಚಿವರಾಗಲೀ, ಮುಖ್ಯ ಮಂತ್ರಿಗಳಾಗಲೀ ಕುಟುಂಬದವರನ್ನು ಭೇಟಿ ಮಾಡಿ, ಧೈರ್ಯ ತುಂಬುವ ಕೆಲಸ ಮಾಡಬೇಕು ಎಂದು ಆಗ್ರಹಿಸಿದರಲ್ಲದೇ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಮೃತ ರೇಣುಕಸ್ವಾಮಿ ತಂದೆ ಕಾಶಿನಾಥಸ್ವಾಮಿ ಶಿವನಗೌಡರು, ತಾಯಿ ರತ್ನಪ್ರಭಾ ಹಾಗೂ ಅವರ ಕುಟುಂಬದವರು ಇದ್ದರು.

# 18 ರಿಂದ 23 ರವರೆಗೆ ವಿದ್ಯುತ್ ಕಾಮಗಾರಿ ರಾತ್ರಿ ಪಾಳೆಯದಲ್ಲಿ ವಿದ್ಯುತ್ ಸರಬರಾಜು

**ರಾಣೇಬೆನ್ನೂರು**

ರಾಣೇಬೆನ್ನೂರು, ಜೂ. 16- ಇದೇ ದಿನಾಂಕ 18 ರಿಂದ 23 ರವರೆಗೆ 110 ಕೆವಿ ಅರೇಮಲ್ಲಾಪುರ ವಿದ್ಯುತ್ ಕೇಂದ್ರದಿಂದ ಹೊಸ 11 ಕೆವಿ ಮಾರ್ಗ ನಿರ್ಮಾಣ ಕಾಮಗಾರಿ ಮಾಡುವ ಪ್ರಯುಕ್ತ ಕೃಷಿ/ನೀರಾವರಿ ಪಂಪ್‌ಸೆಟ್‌ಗಳ 11ಕೆವಿ ಮಾರ್ಗಗಳಿಗೆ ವೇಳೆ ಬದಲಾವಣೆ ಮಾಡಿ ಹಿಂದಿನ ದಿನದ ರಾತ್ರಿ ಪಾಳಿಯಲ್ಲಿ ವಿದ್ಯುತ್ ಸರಬರಾಜು ಮಾಡಲಾಗುವುದು. ಎಫ್-11 ಉದಗಟ್ಟಿ ಮಾರ್ಗದಿಂದ – ಉದಗಟ್ಟಿ, ಮೆಡ್ಲೇರಿ ಹೊಳೆಯ ಹತ್ತಿರ, ಎಫ್-15 ಅಂಕಸಾಪುರ ಮಾರ್ಗದಿಂದ – ಅಂಕಸಾಪುರ ಮೆಡ್ಲೇರಿ ತಾಂಡಾ, ಎಫ್-18 ಅರೇಮಲ್ಲಾಪುರ ಮಾರ್ಗದಿಂದ – ಅರೇಮಲ್ಲಾಪುರ, ಎಫ್-19 ಮೆಡ್ಲೇರಿ ಮಾರ್ಗದಿಂದ – ಮೆಡ್ಲೇರಿ ಗ್ರಾಮಗಳ ಕೃಷಿ, ನೀರಾವರಿ ಪಂಪ್‌ಸೆಟ್‌ಗಳ 11 ಕೆವಿ ಮಾರ್ಗಗಳಿಗೆ ವೇಳೆ ಬದಲಾವಣೆ ಮಾಡಿ ಹಿಂದಿನ ದಿನದ ರಾತ್ರಿ ಪಾಳಿಯಲ್ಲಿ ವಿದ್ಯುತ್ ಸರಬರಾಜು ಮಾಡಲಾಗುವುದು.

# ಬ್ರಾಹ್ಮಣ ಹಿರಿಯ ಚೇತನರ ಸನ್ಮಾನಕ್ಕೆ ಅರ್ಜಿ

ದಾವಣಗೆರೆ, ಜೂ.16- ಬ್ರಾಹ್ಮಣ ಸಮಾಜ ಸೇವಾ ಸಂಘದಿಂದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ದಾವಣಗೆರೆ ತಾಲ್ಲೂಕಿನ ತ್ರಿಮತಸ್ಥ ಬ್ರಾಹ್ಮಣ ಹಿರಿಯ ಚೇತನರ ಸನ್ಮಾನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 31 ಜುಲೈ 2024ಕ್ಕೆ 85 ವರ್ಷ ಪೂರ್ಣ ಗೊಂಡವರು ಹಾಗೂ ಪೂರ್ಣಗೊಳ್ಳುತ್ತಿರುವವರು ಇದೇ ದಿನಾಂಕ 25ರೊಳಗಾಗಿ ನಗರದ ಬ್ರಾಹ್ಮಣ ವಿದ್ಯಾರ್ಥಿ ನಿಲಯದ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ 9448566549, 9483860040 ಸಂಪರ್ಕಿಸಿ.

# ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಬಡವರ ಬದುಕಿನ ಗಾಯದ ಮೇಲೆ ಬರೆ

ದಾವಣಗೆರೆ, ಜೂ. 16- ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷ ಕಾಂಗ್ರೆಸ್ ಕುರುಡು ನಾಟಕವನ್ನಾಡುತ್ತಾ, ಜನರ ಕಣ್ಣಿಗೆ ಮಣ್ಣೆರೆಚುವ ತಂತ್ರ ರೂಪಿಸಿದ್ದು, ಕುರುಡು ನಾಟಕವನ್ನಾಡುತ್ತಿರುವ ನಿಮ್ಮಗಳ ಬಣ್ಣ ಬಯಲಾಗುವ ಕಾಲ ಹತ್ತಿರವಾಗುತ್ತಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ತಿಳಿಸಿದ್ದಾರೆ.

ಪೆಟ್ರೋಲ್ ಮತ್ತು ಡೀಸೆಲ್ ಜಿಎಸ್‌ಟಿ ಅಡಿಯಲ್ಲಿ ಅಂದರೆ ಪ್ರತಿ ಲೀ.ಗೆ 45 ಡೀಸೆಲ್, 50 ಪೆಟ್ರೋಲ್ ಮಾರಾಟ ಮಾಡಬಹುದು. ಕೇಂದ್ರ ಸರ್ಕಾರ ಪೆಟ್ರೋಲ್ ಮೇಲಿನ ಎಸ್. ಎಸ್. 32 ರೂ., ರಾಜ್ಯ ಸರ್ಕಾರ 30 ರೂ. ಗಳನ್ನು ವಿಧಿಸಿ 103 ರಿಂದ 105 ರೂ. ಗಳವರೆಗೆ ಏರಿಕೆ ಮಾಡಿ ಸಾರ್ವಜನಿಕ ಬದುಕಿನಲ್ಲಿ ಹೊರೆಯಾಗುವಂತೆ ನೋಡಿಕೊಳ್ಳುತ್ತಿವೆ.

ಕಾರಣ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಾ ಆದರೆ ಜನಸಮಾನ್ಯರಿಗೆ ಹೊರೆಯಾಗುತ್ತದೆ ಎಂಬ ಸಲಹೆಯನ್ನು ತಮ್ಮ ಸಲಹೆಗಾರರು ನೀಡುತ್ತಿಲ್ಲ. ಶ್ರೀಮಂತರು ಬದುಕುವ ದಾರಿಯನ್ನು ತೋರಿಸುತ್ತಾ, ಕಣ್ಣಿಗೆ ಬಟ್ಟೆ ಕಟ್ಟಿ ಕುರುಡು ನಾಟಕವನ್ನಾಡಿಸುತ್ತಿದ್ದಾರೆ. ಆದ್ದರಿಂದ ತಾವುಗಳು ಚುನಾವಣೆ ಪ್ರಣಾಳಿಕೆಯಲ್ಲಿ ಸಾರ್ವಜನಿಕರಿಗೆ ಆಸೆ, ಆಮಿಷಗಳನ್ನು ತೋರಿಸಿ ಗಾಯದ ಮೇಲೆ ಬರೆ ಎಳೆದಿದ್ದೀರಿ ಎಂದು ರವಿಕುಮಾರ್ ಹೇಳಿದ್ದಾರೆ.

ಜನರೇ ತಕ್ಕ ಪಾಠ ಕಲಿಸುವ ಕಾಲ ದೂರಿಲ್ಲ. ಕೂಡಲೇ ಎಚ್ಚೆತ್ತುಕೊಂಡರೆ ಸರಿ, ತಮ್ಮ ಗುಂಡಿಯನ್ನು ತಾವೇ ತೋಡಿಕೊಳ್ಳುತ್ತೀರಿ ಎಂದು ಎಚ್ಚರಿಸಿದ್ದಾರೆ.

# ನಗರದಲ್ಲಿ ಇಂದು ಬಕ್ರೀದ್ ಆಚರಣೆ

ತ್ಯಾಗ ಹಾಗೂ ಬಲಿದಾನದ ಸಂಕೇತವಾಗಿರುವ ಬಕ್ರೀದ್ ಹಬ್ಬವನ್ನು ಜಿಲ್ಲಾದ್ಯಂತ ಮುಸ್ಲಿಂ ಬಾಂಧವರು ಇಂದು ಆಚರಿಸಲಿದ್ದಾರೆ. ಹಬ್ಬದ ಪ್ರಾರ್ಥನೆ (ನಮಾಜ್ ) ಬೆಳಿಗ್ಗೆ 9-30ಕ್ಕೆ ಈದ್ಗಾ ಹಾಗೂ ಆಯಾ ಪ್ರದೇಶದಲ್ಲಿರುವ ಮಸೀದಿಗಳಲ್ಲಿ ಮಸೀದಿ ಸಮಿತಿ ಮುತುವಲ್ಲಿ, ಕಾರ್ಯದರ್ಶಿ ನಿಗದಿ ಪಡಿಸಿದ ಸಮಯಕ್ಕೆ ಪ್ರಾರ್ಥನೆ ಸಲ್ಲಿಸಲಾಗುವುದು.

# ಹೊನ್ನಾಳಿ ಟಿಎಪಿಸಿಎಂಎಸ್ ಅಧ್ಯಕ್ಷರಾಗಿ ಕಾಯಿ ಬಸವರಾಜ



ಹೊನ್ನಾಳಿ, ಜೂ.16- ತಾಲ್ಲೂಕು ಟಿಎಪಿಸಿಎಂಎಸ್ ಅಧ್ಯಕ್ಷರಾಗಿ ಹಿರೇಮಠದ ಕಾಯಿ ಬಸವರಾಜ, ಉಪಾಧ್ಯಕ್ಷರಾಗಿ ಬಸವನಹಳ್ಳಿ ಹೆಚ್.ಡಿ. ಬಸವರಾಜಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷರಾಗಿದ್ದ ಗಣೇಶಪ್ಪ ಹಾಗೂ ಉಪಾಧ್ಯಕ್ಷ ವಿಶಾಲಾಕ್ಷಿ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಶನಿವಾರ ಚುನಾವಣೆ ನಡೆಯಿತು.

ಟಿಎಟಿಸಿಎಂಎಸ್‌ನ ನಿರ್ದೇಶಕರು ಹಾಗೂ ಶಾಸಕರಾದ ಶಾಂತನಗೌಡ, ಗಜೇಂದ್ರಪ್ಪ, ಬಿಂಬ ಮಂಜು, ಶೇಖರಪ್ಪ, ಶಂಕರ್ ಮೂರ್ತಿ, ಸಿದ್ದನಗೌಡ, ನಾಗಮ್ಮ ಧರ್ಮಪ್ಪ, ಅನಂತ್ ನಾಯಕ್, ಕಾರ್ಯದರ್ಶಿ ಮುರುಗೇಶ್ ಇನ್ನಿತರರಿದ್ದರು.


**ಸೈಟುಗಳು ಮಾರಾಟಕ್ಕಿವೆ**
KHB ಕಾಲೋನಿ (Judge quarters ಹತ್ತಿರ) ಉತ್ತರ 50x80 ಪಶ್ಚಿಮ 30x50, ಸರ್ಕಾರಿ ನೌಕರರ ಬಡಾವಣೆ ಸುತ್ತ-ಮುತ್ತ ಪೂರ್ವ 30x40, ಪಶ್ಚಿಮ 30x50 ಉತ್ತರ 30x50, ವಿದ್ಯಾನಗರ Coffe day ಸರ್ಕಲ್ ಹತ್ತಿರ ದಕ್ಷಿಣ 50x85
ಐಗೂರು ವಿಜಯಕುಮಾರ
99457 02495

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಬನಶಂಕರಿ ಲೇಔಟ್‌ನಲ್ಲಿ 90x83 Corner, 60x55 East, 30x60 West, 30x55 30x55 East ಅಕ್ಕ-ಪಕ್ಕ, 30x40 East.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸಿದ್ಧ ನವೋದಯ**
ಕೋಚಿಂಗ್ ಸೆಂಟರ್ - ದಾವಣಗೆರೆ
ಸ್ಥಳ 1 : ಸೇಂಟ್ಸ್ ಜಾನ್ಸ್ ಸ್ಕೂಲ್ ಬಿಲ್ಡಿಂಗ್ ಶಿವಕುಮಾರಸ್ವಾಮಿ ಬಡಾವಣೆ (ಬೆಳಿಗ್ಗೆ).
2 : ಶ್ರೀ ಸಿದ್ದ ಸಾಯಿ ಕೃಪ ಸಪ್ತಗಿರಿ ಶಾಲೆ ಹಿಂಭಾಗ, ಎಸ್.ಎಸ್. ಬಡಾವಣೆ ಬಿ ಬ್ಲಾಕ್, (ಸಂಜೆ)
3 : ಡಾ. ಸಿ.ವಿ.ರಾಮನ್ ಕಾಲೇಜ್ ಬಿಲ್ಡಿಂಗ್ ಶ್ರೀ ಸೋಮೇಶ್ವರ ವಿದ್ಯಾಲಯ ಪಕ್ಕ, ನಿಟ್ಟುವಳ್ಳಿ ರಸ್ತೆ (ಸಂಜೆ)
99807 26426, 98455 62991

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**Property Hub**
- EC
- E-swathu
- Building Licence
- Khatha Change
96118 66449

**ವೀರಶೈವ ಖಾನಾವಳಿ**
ಕ್ಲೀನಿಂಗ್ ಅಂಡ್ ಸಪ್ಲೈಯರ್ ಕೆಲಸಕ್ಕೆ ಬೇಕಾಗಿದ್ದಾರೆ
99017 70830
99458 29046

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
30x40 North, 30x40 East , 30x40 West, 30x50 West ಪಾರ್ಕ್ ಎದುರುಗಡೆ 30x50 West, 60 ಅಡಿ ರೋಡಿಗಿದೆ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಭೋಗ್ಯಕ್ಕೆ / ಲೀಸ್‌ಗೆ ಇದೆ**
2 BHK, 2 BHK
ರಾಜೀವ್‌ಗಾಂಧಿ ಬಡಾವಣೆ
99029 99615, 83106 11169

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದವಾಡ ಹತ್ತಿರ, ಸುಶಿ ಕನ್ವೆನ್ಷನ್ ಹಾಲ್ ಹಿಂಭಾಗ ಹೊಸ ಬಡಾವಣೆಗಳಲ್ಲಿ 30x40 ಪಶ್ಚಿಮ, 30x50 ಉತ್ತರ, 30x40 ಪಶ್ಚಿಮ ಅಕ್ಕ-ಪಕ್ಕ 30x50 ಪೂರ್ವ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಡಾಲರ್ಸ್‌ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಕಮರ್ಷಿಯಲ್ ಸೈಟು ಮಾರಾಟಕ್ಕಿದೆ**
ಹೊಸ ಬಸ್ ಸ್ಟ್ಯಾಂಡ್ ಹತ್ತಿರ (Nandhi Petrol Bunk near) ಉತ್ತರ 40x50, DC ಮನೆ ಸರ್ಕಲ್ (Double Road) ಪಶ್ಚಿಮ 30x56, ಎರಡು ಕಮರ್ಷಿಯಲ್ ಜಾಗ ಮಾರಾಟಕ್ಕಿದೆ.
ಐಗೂರು ವಿಜಯಕುಮಾರ
99457 02495

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
50x80 East, 40x60 North, 40x60 East, 40x60 South, 50x80 North, 40x60 West.
Rate - 2550/-
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಹೋಟೆಲ್ ಮಾರಾಟಕ್ಕಿದೆ**
Zoca Cafe Franchise
ಮಾಮಾಜ್ ಜಾಯಿಟ್ ರೋಡ್, 3ನೇ ಮೇನ್, 4ನೇ ಕ್ರಾಸ್, ದಾವಣಗೆರೆ.
94483 39413
88928 99641

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಂ.ಸಿ.ಸಿ. ಬಿ ಬ್ಲಾಕ್, 9ನೇ ಮೇನ್, 2ನೇ ಕ್ರಾಸ್‌ನಲ್ಲಿ ಫಸ್ಟ್ ಫ್ಲೋರ್‌ನಲ್ಲಿ ಮನೆ ಬಾಡಿಗೆಗೆ ಇದೆ.
99726 75765

**ಮನೆ ಬಾಡಿಗೆಗೆ ಇದೆ**
1 BHK ಎಲ್ಲಾ ಸೌಕರ್ಯಗಳಿರುವ 1ನೇ, 2ನೇ ಮಹಡಿಯ ದಕ್ಷಿಣ ಉತ್ತರ ಮತ್ತು ಪೂರ್ವ ದಿಕ್ಕಿನ ಬಾಗಿಲುಗಳಿರುವ ಮನೆ ಬಾಡಿಗೆಗೆ ಇದೆ. ಅಶೋಕ ನಗರ, ಕೊಂಡಜ್ಜಿ ರಸ್ತೆ, ಹೆಚ್.ಬಿ. ಗೋಡೌನ್ ಹತ್ತಿರ (Veg & Non Veg)
97409 94762

**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್ ಆಫೀಸ್‌ನಲ್ಲಿ Part time ಕೆಲಸ ಮಾಡಲು ಡ್ರೈವರ್ ಬೇಕಾಗಿದ್ದಾರೆ.
ಸಮಯ : ಸಂಜೆ 7 ರಿಂದ ರಾತ್ರಿ 11.30
ಮೊ. 97385-23711

**FLAT FOR SALE**
2BHK, SQ.FT : 1325
Flat for Lease, 3 BHK, SQFT : 1888
Vidyanagar, last city bus stop, AM Apartment, Nainika Prime Rose
89519 38228, 80502 22181

**ಸೂರ್ಯ ನವೋದಯ ಕೋಚಿಂಗ್ ಸೆಂಟರ್, ದಾವಣಗೆರೆ**
ತರಬೇತಿ ನೀಡುವವರು ಶ್ರೀ ಸುರೇಶ ಪಿ. ಮುರಗಿ ಶ್ರೀಮತಿ ತೇಜಸ್ವಿನಿ ಅಭಿನಂದನ್ B.Sc, B.Ed. ತರಗತಿಗಳು ನಡೆಯುವ ಸ್ಥಳ : KSS ಕಾಲೇಜ್, ಸರಸ್ವತಿ ನಗರ, ಬೆಳಿಗ್ಗೆ 6ರಿಂದ 7.45, AGB ಕಾಲೇಜ್ ಈಶ್ವರಮ್ಮ ಶಾಲೆಯ ಹಿಂಭಾಗ ಸಂಜೆ 5.15 ರಿಂದ 7 ರವರೆಗೆ.
9902824909, 98447 48763

**BUILDING FOR RENT**
1st floor - 50x36 3 Rooms 2nd Floor - 110x36 Open Hall for Hostel, PG, College or Any other Purposes. Contact : DCM Town Ship, Dvg
98444 99943

**ಸರ್ಕಾರಿ ನೌಕರಿಗಾಗಿ**
ಗವರ್ನಮೆಂಟ್ ಜಾಬ್‌ಗೆ ಸಂಪರ್ಕಿಸಿ. ಯಾವುದೇ ಸರ್ಕಾರಿ ನೌಕರಿಗಾಗಿ ಪ್ರಯತ್ನಿಸುತ್ತಿರುವ ಯುವಕ, ಯುವತಿಯರ ಅಭ್ಯರ್ಥಿಗಳ ಅನುಕೂಲಕ್ಕಾಗಿ ಸೂಕ್ತ ಸಲಹೆ ಮತ್ತು ಮಾರ್ಗದರ್ಶನಕ್ಕಾಗಿ ಸಂಪರ್ಕಿಸಿ.
80733 42011

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**REQUIRED**
Required marketing executive Kalptaru Plywoods. #6, 1st main road, S Nijalingappa Layout, Near Lakshmi Floors Mills, Davanagere.
94498 11142, 94483 41142

**ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗೂ ಕಾಫಿ ಮಾಡುವವರು ಹಾಗೂ ಜವಾಬ್ದಾರಿ ಕೆಲಸಗಾರರು ಬೇಕಾಗಿದ್ದಾರೆ.
ಸ್ಥಳ: 1946 ಪ್ರಕಾಶ್ ಕಾಫಿ ವರ್ಕ್ಸ್ ಯೂನಿಟಿ ಆಸ್ಪತ್ರೆ ಹತ್ತಿರ, ಎ.ವಿ.ಕೆ ಕಾಲೇಜು ರಸ್ತೆ, ದಾವಣಗೆರೆ.
97401 53513, 99004 38052

**ಮನೆಗಳು ಬಾಡಿಗೆಗೆ ಇವೆ**
ದಾವಣಗೆರೆ ಆಂಜನೇಯ ಬಡಾವಣೆ, ಹೇಮಾವತಿ ಹಾಸ್ಟೆಲ್ ಹಿಂಭಾಗದ ಕಾರ್ನರ್ ಬಿಲ್ಡಿಂಗ್, 2 BHK ಮನೆಗಳು ಬಾಡಿಗೆಗೆ ಇವೆ. ಸಂಪರ್ಕಿಸಿ :
94483 92975
99866 18266

**ಬೇಕಾಗಿದ್ದಾರೆ**
ನಮ್ಮ ಟೀ ಶಾಫ್‌ನಲ್ಲಿ (ಬೆಲ್ಲದ ಟಾ) ಕ್ಯಾಷ್ ಕೌಂಟರ್ ಕೆಲಸಕ್ಕೆ ಯುವತಿ ಬೇಕಾಗಿದ್ದಾರೆ, ಹೊಸ RTO ಆಫೀಸ್ ರೋಡ್, MG ಬಿಲ್ಡಿಂಗ್ ಎದುರು, ಬೆಳಿಗ್ಗೆ 10Am ರಿಂದ 7.30Pm (ಸಂಬಳ 7000/- ನಮ್ಮಲ್ಲಿಯೇ ತಿಂಡಿ ಮತ್ತು ಊಟದ ವ್ಯವಸ್ಥೆ ಇದೆ) ಸಂಪರ್ಕಿಸಿ :
80503 58132

**ವಾಣಿಜ್ಯ ಮಳಿಗೆಗಳು ಬಾಡಿಗೆಗೆ**
ಎರಡು ವಾಣಿಜ್ಯ ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ. ಹಾರ್ಡ್ ವೇರ್, ಮೆಡಿಕಲ್, ದಿನಸಿ ಅಂಗಡಿಗಳಿಗೆ ಹಾಗೂ ಬ್ಯಾಂಕ್‌ಗಳಿಗೆ ಅನುಕೂಲಕರವಾಗಿರುತ್ತದೆ.
ಸ್ಥಳ : ಬಿಐಇಟಿ ಮೇನ್ ರೋಡ್, ದಾವಣಗೆರೆ
89707 77554

**WANTED**
Boys & Girls required for billing work at Food Mart Supermarket.
Quli : Any Degree
Mob ; 98864 63531

**ಬೇಕಾಗಿದ್ದಾರೆ**
ವಾಟರ್ ಪ್ಯೂರಿಫೈರ್ ಸರ್ವೀಸ್ ಮಾಡಲು ಬೆಂಗಳೂರಿಗೆ ಹುಡುಗರು ಬೇಕಾಗಿದ್ದಾರೆ. ಓದಲು ಬರೆಯಲು ಬರಬೇಕು. ವಯಸ್ಸು 18 ರಿಂದ 30 ಸಂಬಳ 20,000+ಪೆಟ್ರೋಲ್, ವಸತಿ
98453 44346

**ಶಿವ ಸೈಬರ್ ಕೆಫೆ**
ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಮಾಡಲು ಹುಡುಗರು ಮತ್ತು ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
98808 23450

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ERA GROUP OF COMPANIES CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ
ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು
QUALIFICATION : SSLC TO DEGREE
5000 K TO 12,000 K + INCENTIVES
ಸ್ಥಳ : K.R. MARKET, DAVANGERE.
95350 51589, 78670 75786

**ಮನೆ ಬಾಡಿಗೆ ಇದೆ**
ಚಾಮರಾಜಪೇಟೆ ಲೋಕಮಾನ್ಯ ರಸ್ತೆ ಎರಡು ಬೆಡ್ ರೂಮ್ ಇರುವ ಮೊದಲ ಮಹಡಿಯಲ್ಲಿ ಇದೆ. ಸ್ವಂತ ಬೋರ್ ವೆಲ್ ಇದೆ. ಸಂಪರ್ಕಿಸಿ:
78920 18341

**ಸೈಟು ಮಾರಾಟಕ್ಕೆ**
ಗ್ಲಾಸ್ ಹೌಸ್ ಪಕ್ಕ (ಎಸ್.ಎಸ್.ಎನ್ ಕ್ಲೇವ್ಸ್) 30x38 ದಕ್ಷಿಣ ಮುಖ ಇರುವ ಸೈಟು ಮಾರಾಟಕ್ಕಿದೆ.
99862 34416

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮನೆ ಬಾಡಿಗೆಗೆ ಇದೆ**
ನಗರದ ಶಾಮನೂರು ರಸ್ತೆ ಎಸ್.ಎಸ್. ಮಾಲ್ ಎದುರುಗಡೆ ಕುವೆಂಪು ನಗರ ಎಂ.ಸಿ.ಸಿ 'ಬಿ' ಬ್ಲಾಕ್, ಡೋರ್ ನಂ. 3993/43 ಮೊದಲನೇ ಮಹಡಿ ವಿಳಾಸದಲ್ಲಿ ಮೂರು ಬೆಡ್ ರೂಮ್, ಕಾರ್ಪೊರೇಷನ್ ವಾಟರ್, ಬೋರ್ ವಾಟರ್, ಸೋಲಾರ್ ನೀರು ಇರುವ ಮನೆ ಬಾಡಿಗೆಗೆ ಇದೆ. ಆಸಕ್ತರು ಈ ಕೆಳಕಂಡ ಫೋನ್ ನಂಬರ್‌ಗಳಿಗೆ ನೇರವಾಗಿ ಸಂಪರ್ಕಿಸಲು ಕೋರಿದೆ. (ಬ್ರೋಕರ್‌ಗಳಿಗೆ ಅವಕಾಶವಿರುವುದಿಲ್ಲ)
95915 47906
94495 25493

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್ ಶಿವಪ್ಪಯ್ಯ ಸರ್ಕಲ್, ದಾವಣಗೆರೆ. ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**ಸೈಟು ಮಾರಾಟಕ್ಕಿದೆ**
ಕುಂದವಾಡದಲ್ಲಿರುವ 29.98×28.93 = 868 ಚದರ ಅಡಿ ಅಳತೆಯ (ದಕ್ಷಿಣ ) ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
80738 93127

**WANTED**
Computer Operator For College
Contact :
97430 73102

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಭೇಟಿ ಸಮಯ : ಸಂಜೆ 6.30 ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ. ಜೆ. ಬಡಾವಣೆ ದಾವಣಗೆರೆ.

**NEET, K-CET Long Term**
ಬ್ಯಾಚ್‌ಗಳು ಪ್ರಾರಂಭ
ಸಮೃದ್ಧಿ ಅಕಾಡೆಮಿ
96202 62361

**ಸೈಟುಗಳು ಮಾರಾಟಕ್ಕಿವೆ**
ಹರಿಹರ ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಕೆಹೆಚ್‌ಬಿ ಪಕ್ಕದ 40X30 ಅಳತೆಯ ಪೂ-ಪ ದಿಕ್ಕಿನ 4 ಸೈಟುಗಳು ದೂಡಾ ಅನುಮೋದನೆ, ನಗರಸಭೆ ಡೋರ್ ನಂಬರ್, ಇರುವ ಲೇಔಟ್ ಮಾಲೀಕರಿಂದ ನೇರ ಸೌಲಭ್ಯವಿರುವ ಸೈಟುಗಳು ಮಾರಾಟಕ್ಕಿವೆ.
98809 33630

**TUITIONS**
IGCSE, ICSE, CBSE and State Board from Class 5th to 12th MCC `A' Block
98444 92888

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ಕಾಶಿ ಪ್ರವಾಸ 19.07.2024 ರಿಂದ 26.07.2024ರವರೆಗೆ
ಕಾಶಿ, ಅಯೋಧ್ಯೆ, ಪ್ರಯಾಗರಾಜ್, ಗಯಾ, ಬುದ್ದಗಯಾ ಪ್ರವಾಸಕ್ಕೆ ಕೇವಲ 15 ಸೀಟುಗಳು ಇವೆ.
ಆಸಕ್ತಿಯುಳ್ಳವರು ವಿಚಾರಿಸಿ :
94485 33928, 90086 26473

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ , ದಾವಣಗೆರೆ-577002.
97402 58276

**ಬೇಕಾಗಿದ್ದಾರೆ**
ಅಕೌಂಟೆಂಟ್ ಬೇಕಾಗಿದ್ದಾರೆ. ಟ್ಯಾಲಿ ಜ್ಞಾನವುಳ್ಳವರು ಸಂಪರ್ಕಿಸಿ.
ಶಿವ ರೈಸ್‌ಟೆಕ್
ಲೋಕಿಕೆರೆ ರಸ್ತೆ, ಇಂಡಸ್ಟ್ರಿಯಲ್ ಏರಿಯಾ, ದಾವಣಗೆರೆ
94481 49958

**ಡ್ರೈವರ್ ಬೇಕಾಗಿದ್ದಾರೆ**
6 ವ್ಹೀಲ್ Eisher ಲಾರಿಗೆ ದಾವಣಗೆರೆ, ಬೆಂಗಳೂರು, ಮಂಗಳೂರಿಗೆ ಟ್ರಿಪ್ ಓಡಿಸಲು ಡ್ರೈವರ್ ಬೇಕಾಗಿದ್ದಾರೆ.
73530 39444

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಹಿಂದೂ ವಧು-ವರ ಅನ್ವೇಷಣಾ ಕೇಂದ್ರ**
ಮೊದಲನೇ ಅಥವಾ ಎರಡನೇ ವಧು ಮತ್ತು ವರಕ್ಕೆ ಸಂಪರ್ಕಿಸಿ.
89047 54519

# ಕನ್ನಡಕ್ಕೆ ಬೇಕು ವಿಭಿನ್ನ ಆಯಾಮದ ಲಿಪಿ ರಚನೆ

## ದೃಶ್ಯಕಲಾ ವಿವಿಯಲ್ಲಿ 'ಅಕ್ಷರ ಸಿಂಗಾರೋತ್ಸವ', ಅಕ್ಷರ ಕಲಾಕೃತಿಗಳ ಆಕರ್ಷಕ ಪ್ರದರ್ಶನ..!



ಕಲಾ ವಿದ್ಯಾರ್ಥಿಗಳು ಎಲ್ಲ ರೂಪದ ಕಲೆಗಳಿಗೆ ಪ್ರಾಶಸ್ತ್ಯ ನೀಡುವ ಜತೆಗೆ ಯಶಸ್ವಿ ಕಲಾವಿದರಾಗಬೇಕು.
- ಪ.ಸ. ಕುಮಾರ್
ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ

ದಾವಣಗೆರೆ, ಜೂ.16- ಕನ್ನಡದ ಲಿಪಿಯನ್ನು ಬೇರೆ-ಬೇರೆ ಆಯಾಮಗಳ ಮೂಡಿಸುವುದು ವಿಶೇಷ ಕಲೆಯಾಗಿದೆ ಎಂದು ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷ ಪ.ಸ. ಕುಮಾರ್ ಹೇಳಿದರು.

ನಗರದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಶುಕ್ರವಾರ ಆಯೋಜಿಸಿದ್ದ 'ಅಕ್ಷರ ಸಿಂಗಾರೋತ್ಸವ'ದಲ್ಲಿ 'ಕನ್ನಡ ಅಕ್ಷರ ಕಲಾಕೃತಿಗಳ ಪ್ರದರ್ಶಿಸಿ, ಅಕ್ಷರ ಮೂಡಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕನ್ನಡಕ್ಕೆ ಗ್ರಾಫಿಕಲ್ ಕ್ಯಾರಕ್ಟರ್ ತರಲು 40 ವರ್ಷಗಳ ಹಿಂದೆಯೇ ಪ್ರಯತ್ನ ಮಾಡಲಾಗಿದೆ. ಆದರೆ ಇಂದಿನವರಲ್ಲಿ ಕನ್ನಡಾಕ್ಷರ ಕಲಾಕೃತಿಗಳಲ್ಲಿ ಹೊಸತನದ ಕಾಳಜಿ ಕಡಿಮೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಅಕ್ಷರಗಳ ವಿನ್ಯಾಸದಲ್ಲಿ ಹಿರಿಯ ಕಲಾವಿದ ರಮೇಶ್ ಅವರು ಪದಗಳಲ್ಲಿ ಭಾವ ತುಂಬುವಂತಹ ಹೊಸತನ ಸೃಷ್ಟಿಸಿದ್ದರು ಹಾಗೂ ಕನ್ನಡ ಪತ್ರಿಕಾ ರಂಗದಲ್ಲಿ ಅಕ್ಷರಗಳ ಮೂಲ ಪಾತ್ರ ಬದಲಿಸಿದ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ ಎಂದು ಸ್ಮರಿಸಿದರು.

ಕಲಾಕೃತಿ ಅಕ್ಷರಗಳ ಚರಿತ್ರೆ ಉಳಿಸಲು ಅಕಾಡೆಮಿಯ ಪಾತ್ರ ಬಹುಮುಖ್ಯ. ಆದ್ದರಿಂದ ಇಂತಹ ಕಲೆಯ ಜೀವಂತಿಕೆಗಾಗಿ ಕಲೆಯ ಕುರಿತಾದ ದೃಶ್ಯ ಸುರುಳಿಗಳನ್ನು ಅಕಾಡೆಮಿಗಳಿಗೆ ಕೊಡುಗೆ ನೀಡಬೇಕಿದೆ ಎಂದು ತಿಳಿಸಿದರು.

ನಿವೃತ್ತ ಪ್ರಾಧ್ಯಾಪಕ ಮುರಿಗೇಂದ್ರಪ್ಪ ಮಾತನಾಡಿ, ದೃಶ್ಯ ಕಲಾ ಮಹಾವಿದ್ಯಾಲಯಕ್ಕೆ ಒಳ್ಳೆಯ ಇತಿಹಾಸವಿದೆ. ಆದ್ದರಿಂದ ವಿದ್ಯಾರ್ಥಿಗಳು ಜವಾಬ್ದಾರಿಯಿಂದ ಕಲಾ ಮಾಧ್ಯಮವನ್ನು ಉಳಿಸಿ ಎಂದು ಹೇಳಿದರು.

ಕಲೆ ಯಾರಿಗೂ ಒಲಿಯುವುದಿಲ್ಲ. ಆದ್ದರಿಂದ ಕಲಿತ ವಿದ್ಯೆಯನ್ನು ಮತ್ತೊಬ್ಬರಿಗೆ ಹೇಳಿ ಕೊಡುವ ಪರಿಪಾಠ ಬೆಳೆಸಿಕೊಳ್ಳುವಂತೆ ಕಲಾ ವಿದ್ಯಾರ್ಥಿಗಳಿಗೆ ಮನವಿ ಮಾಡಿದರು.

ಕಾಲೇಜಿನ ಪ್ರಾಚಾರ್ಯ ಡಾ. ಜಯರಾಜ್ ಎಂ. ಚಿಕ್ಕಪಾಟೀಲ್ ಪ್ರಾಸ್ತಾವಿಕ ಮಾತನಾಡಿ, ಅಕ್ಷರ ಕೇವಲ ಸಂಕೇತವಲ್ಲ ಭಾವಾರ್ಥ ನೀಡುತ್ತದೆ ಎಂದ ಅವರು, 1970ರಲ್ಲಿ ಪಶ್ಚಿಮ ಬಂಗಾಳದಲ್ಲಿ ಕನ್ನಡ ಅಕ್ಷರಗಳಲ್ಲಿ ಮುದ್ರಣ ಪುಸ್ತಕ ಸಿಕ್ಕಿತ್ತು ಎಂದು ಹೇಳಿದರು. ಕನ್ನಡದಲ್ಲಿ ಅಕ್ಷರಗಳ ಇತಿಹಾಸ ಅಭೂತಪೂರ್ವವಾಗಿದೆ. ಈ ಭಾಷೆಯಲ್ಲಿ ಮೊದಲಿಗೆ ಚಿತ್ರಲಿಪಿ ಹಾಗೂ ಭಾವಲಿಪಿ ರಚನೆಯಾದವು ಎಂದು ತಿಳಿಸಿದರು.

ಈ ವೇಳೆ ಸಹಾಯಕ ಪ್ರಾಧ್ಯಾಪಕ ಡಾ. ಸತೀಶ್ ಕುಮಾರ್ ಪಿ. ವಲ್ಲೇಪುರೆ, ಹಿರಿಯ ಪತ್ರಕರ್ತ ಬಾ.ಮ ಬಸವರಾಜಯ್ಯ, ದತ್ತಾತ್ರೇಯ ಎನ್. ಭಟ್, ಹಿರಿಯ ಕಲಾವಿದ ಮಹಾಲಿಂಗಪ್ಪ ಮತ್ತು ಕಲಾವಿದರು ಇದ್ದರು. ಟಿ.ಬಿ. ಕೋಡಿಹಳ್ಳಿ ಸ್ವಾಗತಿಸಿದರು. ಶಾರದಾ ಪ್ರಾರ್ಥನೆ ಮಾಡಿದರು.

# ಸನ್ಮಾನಿತ ಮಕ್ಕಳು ನಾಡಿಗೆ ಹೆಸರು ತರಬೇಕು

## ಶಾರದಾ ಪುರಸ್ಕಾರ ಸಮಾರಂಭ ಉದ್ಘಾಟಿಸಿದ ಕವಿ ಬಿ.ಆರ್.ಲಕ್ಷ್ಮಣ್ ರಾವ್



ದಾವಣಗೆರೆ, ಜೂ.16- ಪುರಸ್ಕಾರ ಪಡೆದ ಮಕ್ಕಳು ನಾಡು-ನುಡಿಗೆ ಗೌರವ ತರಬೇಕು ಎಂದು ಹಿರಿಯ ಕವಿ ಬಿ.ಆರ್. ಲಕ್ಷ್ಮಣ್‌ರಾವ್ ಹೇಳಿದರು.

ಶ್ರೀಮತಿ ಪ್ರೇಮಾ ಅರುಣಾಚಲ ಎನ್. ರೇವಣಕರ್ ಪ್ರತಿಷ್ಠಾನದ ವತಿಯಿಂದ ನಗರದ ನರಹರಿ ಶೇಟ್ ಕಲ್ಯಾಣ ಮಂಟಪದಲ್ಲಿ ಭಾನುವಾರ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ದೈವಜ್ಞ ಬ್ರಾಹ್ಮಣ ಸಮಾಜದ ಮಕ್ಕಳಿಗಾಗಿ ಏರ್ಪಡಿಸಿದ್ದ ರಾಜ್ಯ ಮಟ್ಟದ ಶಾರದಾ ಪುರಸ್ಕಾರ-2024ರ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಹಿಂದಿನ ಕಾಲದಲ್ಲಿ ಸಾಧನೆ ಗುರುತಿಸಿ ಪ್ರೋತ್ಸಾಹಿಸುವರಿರಲಿಲ್ಲ. ಆದರೆ, ಈಗಿನ ಮಕ್ಕಳಿಗೆ ಈ ಭಾಗ್ಯ ಒದಗಿ ಬಂದಿದ್ದು, ಪ್ರತಿಭಾ ಪುರಸ್ಕಾರ ಮಕ್ಕಳ ಸಾಧನೆಗೆ ಸ್ಫೂರ್ತಿ ನೀಡಲಿದೆ ಎಂದು ಹೇಳಿದರು.

ಪುರಸ್ಕಾರ ಪಡೆಯುತ್ತಿರುವವರಲ್ಲಿ ವಿದ್ಯಾರ್ಥಿನಿಯರ ಸಂಖ್ಯೆಯೇ ಹೆಚ್ಚಾಗಿದ್ದು, ಮಹಿಳೆಯರು ಪುರುಷರಿಗಿಂತ ಮೇಲುಗೈ ಸಾಧಿಸುತ್ತಿರುವುದು ಸಂತಸದ ಸಂಗತಿ ಎಂದರು.

ಚುಟುಕು ಸಾಹಿತಿ ಎಚ್. ಡುಂಡಿರಾಜ್ ಮಾತನಾಡಿ, ಮಕ್ಕಳಿಗೆ ಅಚ್ಚುಕಟ್ಟಾಗಿ ಪ್ರಶಸ್ತಿ ನೀಡುತ್ತಿರುವ ಶ್ರೀಮತಿ ಪ್ರೇಮಾ ಅರುಣಾಚಲ ಎನ್. ರೇವಣಕರ್ ಪ್ರತಿಷ್ಠಾನದ ಕಾರ್ಯ ಮಾದರಿಯಾಗಿದ್ದು, ಇದರಿಂದ ಎಲ್ಲಾ ಸಮಾಜಗಳ ಬಂಧುಗಳ ಪ್ರೇರಣೆ ಪಡೆದು ಅನುಕರಿಸಬೇಕು ಎಂದು ಹೇಳಿದರು.

ಪ್ರತಿ ವಿದ್ಯಾರ್ಥಿಯ ಹಿಂದೆ ಒಬ್ಬ ಗುರು ಮತ್ತು ಮುಂದೆ ನಿರ್ದಿಷ್ಟ ಗುರಿ ಇದ್ದಾಗ ಮಾತ್ರ ಯಶಸ್ಸು ಕಾಣಲು ಸಾಧ್ಯ ಎಂದರು. ಈ ವೇಳೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ 125 ಮಕ್ಕಳಿಗೆ ಶಾರದಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಪ್ರತಿಷ್ಠಾನದ ಸಂಸ್ಥಾಪಕ ನಲ್ಲೂರು ಅರುಣಾಚಲ ಎನ್. ರೇವಣಕರ್, ಪ್ರತಿಷ್ಠಾನದ ಅಧ್ಯಕ್ಷೆ ಪ್ರೇಮಾ ಅರುಣಾಚಲ ಎನ್. ರೇವಣಕರ್, ದೈವಜ್ಞ ಬ್ರಾಹ್ಮಣ ಸಮಾಜದ ಅಧ್ಯಕ್ಷ ದಯಾನಂದ ಜಿ. ನೇತಲ್‌ಕರ್, ಸರಾಫ್ ಜ್ಯೂಯಲರ್ಸ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಎಸ್. ನಲ್ಲೂರು ರಾಜ್‌ಕುಮಾರ್ ಮತ್ತಿತರರಿದ್ದರು.

# ನಗರದಲ್ಲಿ ಇಂದು 'ಸ್ವರಾಭರಣ' ಸಮಾರೋಪ

ಕರ್ನಾಟಕ ಸುಗಮ ಸಂಗೀತ ಪರಿಷತ್, ಅನುಶ್ರೀ ಸಂಗೀತ ಶಾಲೆ ಹಾಗೂ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಇಂದು ಸಂಜೆ 5 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ಸ್ಥಳೀಯ ಕವಿಗಳ ಪದ್ಯಗಾಯನ 'ಸ್ವರಾಭರಣ'ದ ಸಮಾರೋಪ ಸಮಾರಂಭ ನಡೆಯಲಿದೆ.

ಅಧ್ಯಕ್ಷತೆಯನ್ನು ಕರ್ನಾಟಕ ಸುಗಮ ಸಂಗೀತ ಪರಿಷತ್ ಕಾರ್ಯಾಧ್ಯಕ್ಷ ಡಾ. ಕಿಕ್ಕೇರಿ ಕೃಷ್ಣಮೂರ್ತಿ ವಹಿಸಲಿದ್ದು, ಅನುಶ್ರೀ ಸಂಗೀತ ಶಾಲೆಯ ಸಂಸ್ಥಾಪಕರಾದ ವಿದುಷಿ ವೀಣಾ ಸದಾನಂದ ಹೆಗಡೆ ಸ್ಥಳೀಯ ಕವಿ, ಕವಯತ್ರಿಯರ ಕವನಗಳಿಗೆ ರಾಗ ಸಂಯೋಜಿಸಿ, ಹಾಡಿ 'ಸ್ವರಾಭರಣ' ಪ್ರಸ್ತುತಿಪಡಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಬಿ. ವಾಮದೇವಪ್ಪ, ಪ್ರವೀಣ್ ಬಿ.ವಿ., ಪ್ರಶಾಂತ ಉಡುಪ, ನಾಗರಾಜ್ ವಿ.ಬೈರಿ, ಶ್ರೀಮತಿ ಶಾಂತಾ ಎಸ್.ಶೆಟ್ಟಿ, ಡೇವಿಡ್ ಪ್ರತಿಭಾಂಜಲಿ ಆಗಮಿಸಲಿದ್ದಾರೆ.

# ಮೋದಿ ಮೂರನೇ ಬಾರಿಗೆ ಪ್ರಧಾನಿ ದೇವರಿಗೆ ಹರಕೆ ಸಲ್ಲಿಸಿದ ಅಭಿಮಾನಿ



ಹರಪನಹಳ್ಳಿ, ಜೂ. 16 - ನರೇಂದ್ರ ಮೋದಿಯವರು ಮೂರನೇ ಬಾರಿಗೆ ಪ್ರಧಾನ ಮಂತ್ರಿಯಾಗಲಿ ಎಂದು ದೇವರಿಗೆ ಹರಕೆ ಹೊತ್ತು ಅಭಿಮಾನ ಮೆರೆದಿದ್ದ ತಾಲ್ಲೂಕಿನ ಹಿರೇಮೇಗಳಗೆರೆ ಗ್ರಾಮದ ದಾನಪ್ಪರ್ ಮಲ್ಲಿಕಾರ್ಜುನ ಅವರ ನಿವಾಸಕ್ಕೆ ಮಾಜಿ ಸಚಿವ ಜಿ. ಕರುಣಾಕರ ರೆಡ್ಡಿ ಭಾನುವಾರ ಭೇಟಿ ನೀಡಿ ಅವರನ್ನು ಸನ್ಮಾನಿಸಿ, ಗೌರವಿಸಿದರು.

ಈ ವೇಳೆ ಮಾತನಾಡಿದ ಕರುಣಾಕರ ರೆಡ್ಡಿ ಅವರು ಮಲ್ಲಿಕಾರ್ಜುನ ನಂತಹ ಕೋಟ್ಯಾಂತರ ಅಭಿಮಾನಿಗಳ ಆಶೀರ್ವಾದದಿಂದಾಗಿ ನರೇಂದ್ರ ಮೋದಿಯವರು ಮೂರನೇ ಬಾರಿಗೆ ಪ್ರಧಾನಿಯಾಗಿದ್ದಾರೆ ರಾಷ್ಟ್ರವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ನಾವೆಲ್ಲರೂ ಅವರಿಗೆ ಶಕ್ತಿ ತುಂಬೋಣ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖಂಡ ಆರ್. ಲೋಕೇಶ್, ಯಡಿಹಳ್ಳಿ ಶೇಖಪ್ಪ, ಎಂ. ಮಲ್ಲೇಶ, ಮಹೇಶ, ಮಂಜುನಾಥ್, ಪ್ರಕಾಶ, ಪರಶುರಾಮ, ರುದ್ರಪ್ಪ, ಅಶೋಕ, ಕರಿಬಸಪ್ಪ, ಸೇರಿದಂತೆ ಇತರರು ಇದ್ದರು.

# ಸಭೆ ಕರೆಯಲು ಜಿಲ್ಲಾಧಿಕಾರಿಗಳಿಗೆ ಹರಿಹರ ನಗರಸಭಾ ಸದಸ್ಯರ ಮನವಿ

ಹರಿಹರ, ಜೂ.16- ಇಲ್ಲಿನ ನಗರಸಭೆಯಿಂದ ತುರ್ತು ಕೆಲಸಗಳು ಮತ್ತು ಕಾಮಗಾರಿಗಳು ನಡೆಯದೇ ಸಾರ್ವಜನಿಕರಿಗೆ ತೊಂದರೆ ಆಗುತ್ತಿದ್ದು, ಕೂಡಲೇ ಕೌನ್ಸಿಲ್ ಸಾಮಾನ್ಯ ಸಭೆಯನ್ನು ಕರೆಯುವಂತೆ, ನಗರಸಭೆ ಆಡಳಿತಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ಡಾ.ಎಂ.ವಿ.ವೆಂಕಟೇಶ್ ಅವರಿಗೆ ನಗರಸಭೆ ಸದಸ್ಯರ ನಿಯೋಗವು ಮನವಿ ಸಲ್ಲಿಸಿತು.

ಕಳೆದ ವರ್ಷ ಅಕ್ಟೋಬರ್ 26 ರಂದು ಕೌನ್ಸಿಲ್ ಸಭೆ ನಡೆಸಲಾಗಿತ್ತು. ನಂತರ ಯಾವುದೇ ಸಭೆ ನಡೆದಿರುವುದಿಲ್ಲ ಎಂಬುದನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಯಿತು. ಈ ನಿಯೋಗದಲ್ಲಿ ಸದಸ್ಯರಾದ ಶಂಕರ್ ಖಟಾವ್ಕರ್, ಕೆ.ಜಿ.ಸಿದ್ದೇಶ್, ಎಸ್.ಎಂ.ವಸಂತ್, ಬಾಬುಲಾಲ್, ಹನುಮಂತಪ್ಪ, ಸುಮಿತ್ರ ಮರಿದೇವ್, ಆರ್.ಸಿ. ಜಾವೀದ್, ರಜನಿಕಾಂತ್, ಮುಜಾಮಿಲ್ ಬಿಲ್ಲು ಮತ್ತು ದಾದಾ ಖಲಂದರ್ ಮುಖಂಡರಾದ ದಾದಾಪೀರ್ ಭಾನುವಳ್ಳಿ, ಮನ್ಸೂರ್ ಮದ್ದಿ ಮತ್ತಿತರರು ಇದ್ದರು.



# ಜೈನ್ ಲೇಔಟ್‌ನಲ್ಲಿ ಪರಿಸರ ದಿನಾಚರಣೆ




ದಾವಣಗೆರೆ, ಜೂ. 16 - ನಗರದ ಜೈನ್ ಲೇಔಟ್‌ನಲ್ಲಿ ಸಸಿ ನೆಡುವ ಮೂಲಕ ಶಶಿಕಲಾ ಬಡದಾಳ್ ಅವರ ನೇತೃತ್ವದಲ್ಲಿ ಪರಿಸರ ದಿನಾಚರಣೆ ಆಚರಿಸಲಾಯಿತು. ಮುಖ್ಯ ಅತಿಥಿಯಾಗಿ ಶಾರದಾ ರಾಯ್ಕರ್ ಆಗಮಿಸಿದ್ದರು ಹಾಗು ಕಾರ್ಯಕ್ರಮದಲ್ಲಿ ಲೇಔಟ್‌ನ ಮಹಿಳೆಯರು ಭಾಗವಹಿಸಿದ್ದರು.

# ಲೋಕಸಭೆ ಚುನಾವಣೆ ಸೋಲು : ನಾಳೆ ಕಾಂಗ್ರೆಸ್ ಪಕ್ಷದ ಆತ್ಮಾವಲೋಕನ ಸಭೆ

**ರಾಣೇಬೆನ್ನೂರು**

ರಾಣೇಬೆನ್ನೂರು, ಜೂ.16- ಹಾವೇರಿ - ಗದಗ ಲೋಕಸಭೆ ಚುನಾವಣೆಯಲ್ಲಿ ಪಕ್ಷ ಅನುಭವಿಸಿದ ಸೋಲಿನ ಆತ್ಮಾವಲೋಕನ ಮಾಡಲು ರಾಣೇಬೆನ್ನೂರು ತಾಲ್ಲೂಕು ಕಾಂಗ್ರೆಸ್ ಪಕ್ಷದ ಸಭೆ ಮಂಗಳವಾರ ಬೆಳಿಗ್ಗೆ ನಡೆಯಲಿದೆ ಎಂದು ಅಧ್ಯಕ್ಷ ಮಂಜನಗೌಡ ಪಾಟೀಲ ತಿಳಿಸಿದ್ದಾರೆ. ದಿನಾಂಕ 18 ರಂದು ನಡೆಯುವ ಈ ಸಭೆಯಲ್ಲಿ, ಶಾಸಕ ಪ್ರಕಾಶ್ ಕೋಳಿವಾಡ, ಅಭ್ಯರ್ಥಿ ಆನಂದ ಗಡ್ಡದೇವರಮಠ, ಮಾಜಿ ಸಚಿವ ಆರ್. ಶಂಕರ್ ಹಾಗೂ ಮುಖಂಡರು ಪಾಲ್ಗೊಳ್ಳಲಿದ್ದಾರೆ ಎಂದು ಮಂಜನಗೌಡ ತಿಳಿಸಿದ್ದಾರೆ.

# ಭಾವಸಾರ ವಿಷನ್ ಸಂಸ್ಥೆಯಿಂದ ನಗರದಲ್ಲಿ ಮೆಗಾ ರಕ್ತದಾನ ಶಿಬಿರ



ದಾವಣಗೆರೆ, ಜೂ. 16- ನಗರದ ಭಾವಸಾರ ವಿಷನ್ ಸಂಸ್ಥೆ ವತಿಯಿಂದ ಮೆಗಾ ರಕ್ತದಾನ ಶಿಬಿರ ನಡೆಸಲಾಯಿತು. ಚಿಗಟೇರಿ ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಗೀತಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ರಕ್ತದಾನಿಗಳಿಗೆ ವೈದ್ಯಾಧಿಕಾರಿ ಪ್ರಮಾಣ ಪತ್ರಗಳನ್ನು ನೀಡಿ ಅಭಿನಂದಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷರಾದ ಶ್ರೀಮತಿ ಸರಳ ಅಮಟೆ, ಕಾರ್ಯದರ್ಶಿ ರಮೇಶಬಾಬು ಗುಜ್ಜರ್, ಮಾಜಿ ಗೌರ್ನರ್ ಹನುಮಂತರಾವ್ ಮಾಳದಕರ್, ಮಾಜಿ ಅಧ್ಯಕ್ಷ ಗಣೇಶ್ ವಾದೋನೆ, ವಿಜಯ್ ಕುಮಾರ ಟಿಕಾರೆ, ಪದಾಧಿಕಾರಿಗಳಾದ ದಯಾನಂದ ಮಹೇಂದ್ರಕರ್, ಶ್ರೀಮತಿ ಅನುಸೂಯಾ ಗುಜ್ಜರ್, ಸದಸ್ಯರಾದ ಮಂಜುನಾಥ್ ಗಡ್ಡಾಳೆ, ಡಾ. ಶಿಲ್ಪಾ ಹಿರಾಸ್ಕರ್ ಉಪಸ್ಥಿತರಿದ್ದರು.

# ವ್ಯಕ್ತಿತ್ವ ವಿಕಸನಗೊಳಿಸುವುದು ನಿಜವಾದ ಶಿಕ್ಷಣ

**ವೀರಶೈವ ಲಿಂಗಾಯತ ನೌಕರರ ಪತ್ತಿನ ಸಹಕಾರ ಸಂಘದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಎಸ್ಪಿ ಉಮಾ ಪ್ರಶಾಂತ್**

ದಾವಣಗೆರೆ, ಜೂ. 16- ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆ ಮತ್ತು ವ್ಯಕ್ತಿತ್ವ ವಿಕಸನಗೊಳಿಸುವುದು ನಿಜವಾದ ಶಿಕ್ಷಣ. ನೈತಿಕ ಮೌಲ್ಯಗಳನ್ನು ಹೆಚ್ಚಿಸಲು ಶಿಕ್ಷಣ ಸಹಕಾರಿಯಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ವೀರಶೈವ ಲಿಂಗಾಯತ ನೌಕರರ ಪತ್ತಿನ ಸಹಕಾರ ಸಂಘದ ವತಿಯಿಂದ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ಷೇರುದಾರರ ಮಕ್ಕಳಿಗೆ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸುವ ಮತ್ತು ನಾಯಕತ್ವದ ಗುಣಗಳನ್ನು ಬೆಳೆಸುವುದು ಶಿಕ್ಷಣದ ಮೂಲ ಉದ್ದೇಶವಾಗಬೇಕು. ಶಿಕ್ಷಣವನ್ನು ಕೇವಲ ಅಂಕಗಳಿಕೆಗೆ ಸೀಮಿತಗೊಳಿಸುವುದು ಸರಿಯಲ್ಲ. ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಗೆ ಪೂರಕವಾಗಿರಬೇಕು ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಬೇಡವಾದ ವಿಷಯಗಳಿಗೆ ಮೊಬೈಲ್ ಬಳಸುವ ಮೂಲಕ ಸಮಯ ವ್ಯರ್ಥ ಮಾಡುತ್ತಿರುವುದು ಕಂಡುಬರುತ್ತಿದೆ. ಉಪಯುಕ್ತ ಮಾಹಿತಿಗಾಗಿ ಬಳಕೆ ಅಗತ್ಯ ಎಂದರು.

ಉನ್ನತ ಹುದ್ದೆಗಳಲ್ಲಿರುವ ಬಹುತೇಕರು ಗ್ರಾಮೀಣ ಪ್ರದೇಶದ, ಬಡತನ ಅನುಭವಿಸಿ ಬಂದಂತವರೇ ಆಗಿರುತ್ತಾರೆ. ಅಬ್ದುಲ್ ಕಲಾಂ, ನಾರಾಯಣ್ ಸೇರಿದಂತೆ ಅನೇಕರನ್ನು ಉದಾಹರಿಸಿದ ಅವರು, ಸತತ ಪರಿಶ್ರಮ, ಆಸಕ್ತಿ ಇದ್ದಲ್ಲಿ ಸಾಧನೆ ಸುಲಭವಾಗುತ್ತದೆ. ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಪ್ರಮುಖವಾದುದು ಎಂದು ಹೇಳಿದರು.

ಉಪನ್ಯಾಸ ನೀಡಿದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ. ಬಿ.ಜಿ. ಸಿದ್ಧಲಿಂಗಮ್ಮ ಅವರು, ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿ ಜೀವನದ ಪ್ರಮುಖ ಘಟ್ಟ. ಈ ವೇಳೆ ವಿದ್ಯಾರ್ಥಿಗಳು ಓದಿನ ಕಡೆ ಹೆಚ್ಚು ಗಮನಹರಿಸುವ ಜೊತೆಗೆ ನಿರ್ದಿಷ್ಟ ಗುರಿ ಮತ್ತು ಛಲವನ್ನು ಹೊಂದಬೇಕೆಂದು ಕರೆ ನೀಡಿದರು.

ನಿಜವಾದ ಜ್ಞಾನ ಶಿಸ್ತನ್ನು ಬೆಳೆಸುತ್ತದೆ. ವಿದ್ಯೆ ಕೇವಲ ಅಂಕಗಳಿಕೆಗೆ ಮಾತ್ರ ಸೀಮಿತವಾಗಬಾರದು. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು. ಸಮಯ ಪ್ರಜ್ಞೆ, ಗುರಿ, ಪರಿಶ್ರಮ ಇದ್ದಲ್ಲಿ ಗುರಿ ತಲುಪಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಬಿ.ಪಾಲಾಕ್ಷಿ ಅವರು, ಪ್ರತಿಭಾವಂತರು ಸಮಾಜ ಮುಖಿಯಾದಾಗ ಸಮಾಜದ ಸ್ವಾಸ್ಥ್ಯ ಕಾಪಾಡಲು ಸಾಧ್ಯ. ವಿದ್ಯಾರ್ಥಿಗಳಲ್ಲಿ ಶಿಸ್ತು, ಬದ್ಧತೆ, ಗುರಿ ಅತಿ ಮುಖ್ಯ ಎಂದರು.

ವೀರಶೈವ ಲಿಂಗಾಯತ ನೌಕರರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಲೋಕಣ್ಣ ಮಾಗೋಡ್ರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಸ್ಥಾಪಕ ಅಧ್ಯಕ್ಷ ಕೆ. ಶಿವಶಂಕರ್, ಉಪಾಧ್ಯಕ್ಷ ರೇವಣಸಿದ್ಧಪ್ಪ ಅಂಗಡಿ, ನಿರ್ದೇಶಕರಾದ ಎಂ. ಸಿದ್ದೇಶ್, ಎನ್. ಓಹಿಲೇಶ್ವರ, ಕೆ. ಅರುಣ್, ಬಿ.ಯು. ಕುಬೇರಪ್ಪ, ಕೆ.ಆರ್. ಸಿದ್ದಲಿಂಗೇಶ್, ಹೆಚ್.ಕೆ. ಕಲ್ಲೇಶ್, ಆರ್. ಸಿ. ಅನಸೂಯಮ್ಮ, ಬಿ.ಬಿ. ವಿಶಾಲಾಕ್ಷಮ್ಮ, ಟಿ.ಜಿ. ಶಿಲ್ಪಾ, ಎನ್.ಎಸ್. ಮಲ್ಲಿಕಾರ್ಜುನಪ್ಪ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ವೀರೇಶ್ ಎಸ್. ಒಡೇನಪುರ, ಕೃಷಿ ಇಲಾಖೆ ಅಧಿಕಾರಿಗಳಾದ ರೇವಣಸಿದ್ದನಗೌಡ, ತಿಪ್ಪೇಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಎಂ. ಗೌರಿ ಅವರ ಭರತ ನಾಟ್ಯ ಪ್ರದರ್ಶನ ಗಮನ ಸೆಳೆಯಿತು. ಬಿ.ಟಿ. ಪ್ರಕಾಶ್ ವಚನ ಗೀತೆ ಹಾಡಿದರು. ರೇವಣಸಿದ್ಧಪ್ಪ ಅಂಗಡಿ ಸ್ವಾಗತಿಸಿದರು.



# ವಿದ್ಯೆಯನ್ನು ಪಡೆದರೆ ಭವಿಷ್ಯದಲ್ಲಿ ಅತ್ಯುತ್ತಮ ಜೀವನ ಸಾಧ್ಯ : ಗುರುಬಸವ ಸ್ವಾಮೀಜಿ



**ವಿಶ್ವ ವೀರಶೈವ ಲಿಂಗಾಯತ ಏಕೀಕರಣ ಪರಿಷತ್ತಿನಿಂದ ಪ್ರತಿಭಾ ಪುರಸ್ಕಾರ**

ದಾವಣಗೆರೆ, ಜೂ. 16- ಜೀವನದಲ್ಲಿ ವಿದ್ಯಾರ್ಜನೆ ಪಡೆಯುವುದು ಅತಿ ಪ್ರಮುಖವಾಗಿದ್ದು, ವಿದ್ಯೆಯನ್ನು ಪಡೆದಲ್ಲಿ ಭವಿಷ್ಯದಲ್ಲಿ ಅತ್ಯುತ್ತಮ ಜೀವನ ನಿರ್ವಹಿಸಬಹುದು ಎಂದು ಕಮ್ಮತ್ತಹಳ್ಳಿ ವಿರಕ್ತಮಠ-ಪಾಂಡೋಮಟ್ಟಿಯ ಶ್ರೀ ಡಾ. ಗುರುಬಸವ ಸ್ವಾಮೀಜಿ ಪ್ರತಿಪಾದಿಸಿದರು.

ವಿಶ್ವ ವೀರಶೈವ ಲಿಂಗಾಯತ ಏಕೀಕರಣ ಪರಿಷತ್ ಮತ್ತು ವಿಶ್ವ ಕಲ್ಯಾಣ ಪರಿಸರ ಗ್ರಾಹಕ ಸಾಂಸ್ಕೃತಿಕ ಪರಿಷತ್ ಇವರ ಜಂಟಿ ಆಶ್ರಯದಲ್ಲಿ ನಗರದ ಗುರುಭವನದಲ್ಲಿ ನಿನ್ನೆ ಏರ್ಪಾಡಾಗಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ವಿದ್ಯಾರ್ಥಿ ಜೀವನ ಅಮೂಲ್ಯವಾದ ಅವಕಾಶ. ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವ ನಿಟ್ಟಿನಲ್ಲಿ ಏಕಾಗ್ರತೆಗೆ ಆದ್ಯತೆ ನೀಡಬೇಕು. ಚಂಚಲವಾದ ಮನಸ್ಸನ್ನು ಏಕಾಗ್ರತೆಯಲ್ಲಿ ತಂದುಕೊಂಡು ವಿದ್ಯಾಭ್ಯಾಸ ಮಾಡಿದಲ್ಲಿ ಜೀವನದ ಚಿತ್ರಣ ವನ್ನೇ ಬದಲಾಯಿಸಬಹುದು ಎಂದು ಶ್ರೀಗಳು ಉದಾಹರಣೆಯೊಂದಿಗೆ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು.

ಕೇವಲ ಅಂಕ ಗಳಿಕೆಯೇ ಸಾಧನೆ ಯಲ್ಲ. ಅಂಕಗಳಿಂದ ಸಾಧನೆ ಮಾಡದ ಹಲವರು ಭವ್ಯ ಭವಿಷ್ಯದ ಸಾಧಕರಾಗಿ ದ್ದಾರೆ. ಈ ಹಿನ್ನೆಲೆಯಲ್ಲಿ ಅಂಕ ಗಳಿಕೆಯ ಸಾಧನೆ ಮೀರಿದ ಜೀವನವಿದೆ ಎಂಬುದನ್ನು ಅರಿತುಕೊಂಡು ಜೀವನ ಸಾಗಿಸಬೇಕು ಎಂದು ಶ್ರೀಗಳು ಹಿತ ನುಡಿದರು.

ನೂರಕ್ಕೆ ನೂರು ಅಂಕಗಳನ್ನು ಪಡೆದ ಎಲ್ಲಾ ವಿದ್ಯಾರ್ಥಿಗಳೂ ಸಾಧಕರಲ್ಲ. ಅದಕ್ಕಿಂತ ಕಡಿಮೆ ಅಂಕ ಪಡೆದ ಎಷ್ಟೋ ವಿದ್ಯಾರ್ಥಿಗಳೂ ಸಾಧಕರಾಗಿದ್ದಾರೆ. ಈ ನಿಟ್ಟಿನಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ ಗಳಿಗೆ ಕಡಿಮೆ ಅಂಕ ಪಡೆದ ತಮ್ಮನ್ನು ಹೋಲಿಕೆ ಮಾಡಿಕೊಂಡು ಜಿಗುಪ್ಸೆ ಹೊಂದದೆ ಆಶಾಭಾವನೆ ಹೊಂದಿ ಮುನ್ನಡೆಯಬೇಕು ಎಂದು ಶ್ರೀಗಳು ಕರೆ ನೀಡಿದರು.

**ಛಲ ಹೊಂದಬೇಕು** : ಜೀವನದಲ್ಲಿ ಗುರಿ ಮುಖ್ಯ. ಯಾವುದೇ ಅಡೆ-ತಡೆಗಳು ಬಂದರೂ ಛಲ ಬಿಡದೇ ವಿದ್ಯಾಭ್ಯಾಸ ಮಾಡಿದಾಗ ಸಾಧನೆ ಮಾಡಲು ಸಾಧ್ಯ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಾಧೀಶರಾದ ಅರಳಿ ನಾಗರಾಜ್ ಗಂಗಾವತಿ ಅವರು ಅಭಿಪ್ರಾಯಪಟ್ಟರು.

ಸಮಾರಂಭವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ದೃಢ ಚಿತ್ತ - ಶ್ರದ್ಧೆ-ಸತತ ಪರಿಶ್ರಮದಿಂದ ಸಾಧನೆ ಮಾಡಬಹುದು ಎಂದು ಹಲವಾರು ಸಾಧಕರ ಸಾಧನೆಯನ್ನು ಮುಂದಿಟ್ಟು ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

**ಗುರಿ ಮುಖ್ಯವಾಗಿರಲಿ** : ಜೀವನದಲ್ಲಿ ಗುರಿಯನ್ನು ಮುಖ್ಯವಾಗಿಟ್ಟುಕೊಂಡಲ್ಲಿ ಎಂತಹ ಸಮಸ್ಯೆಗಳನ್ನಾದರೂ ಎದುರಿಸಲು ಸಾಧ್ಯ ಎಂದು ವಿಶ್ವ ವೀರಶೈವ ಲಿಂಗಾಯತ ಏಕೀಕರಣ ಪರಿಷತ್ ಅಧ್ಯಕ್ಷರೂ, ಹಿರಿಯ ನ್ಯಾಯವಾದಿಗಳೂ ಆದ ರೇವಣ್ಣ ಬಳ್ಳಾರಿ ಪ್ರತಿಪಾದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಮ್ಮ ಜೀವನದಲ್ಲಿ ಅನುಭವಿಸಿದ ಹಲವಾರು ಸಮಸ್ಯೆಗಳು ಮತ್ತು ಆ ಸಮಸ್ಯೆಗಳನ್ನು ಎದುರಿಸಿ ಮಾಡಿದ ಸಾಧನೆಗಳನ್ನು ವಿದ್ಯಾರ್ಥಿಗಳು ಮತ್ತು ಪೋಷಕರೊಂದಿಗೆ ಹಂಚಿಕೊಂಡರಲ್ಲದೇ, ಪ್ರತಿಯೊಬ್ಬರೂ ಸಾಧಕರಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ, ಮಲೇಬೆನ್ನೂರಿನ ದರ್ಶನ್ ಟ್ರೇಡರ್ಸ್ ರೈಸ್ ಮಿಲ್ ಮಾಲೀಕ ಹೆಚ್.ಎಸ್. ರುದ್ರಯ್ಯ, ವಿಶ್ವ ವೀರಶೈವ ಲಿಂಗಾಯತ ಏಕೀಕರಣ ಪರಿಷತ್ ಕಾರ್ಯಾಧ್ಯಕ್ಷ ಇಂದೂಧರ ನಿಶಾನಿಮಠ, ಉಪಾಧ್ಯಕ್ಷ ಬಸವರಾಜ ಸಿರಿಗೆರೆ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಜಾಗತಿಕ ಲಿಂಗಾಯತ ಮಹಾಸಭಾದ ಮಹಿಳಾ ಘಟಕದ ಜಿಲ್ಲಾಧ್ಯಕ್ಷರಾದ ಶ್ರೀಮತಿ ಕುಸುಮಾ ಲೋಕೇಶ್ ಮತ್ತು ಪ್ರೌಢಶಾಲೆಯ ವಿಶ್ರಾಂತ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಜಿ.ಕೆ. ಶಕುಂತಲಾ ಅವರುಗಳು ವಿವಿಧ ವಿಷಯಗಳ ಕುರಿತಂತೆ ಉಪನ್ಯಾಸ ನೀಡಿದರು.

ಇದೇ ಸಂದರ್ಭದಲ್ಲಿ ಶ್ರೀ ಗುರು ರೇಣುಕರ ಯುಗಮಾನೋತ್ಸವ ಮತ್ತು 891ನೇ ಶ್ರೀ ಬಸವೇಶ್ವರ ಜಯಂತ್ಯೋತ್ಸವವನ್ನು ಆಚರಿಸಲಾಯಿತು. ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯ ಸರ್ವಧರ್ಮದ 150 ಹೆಚ್ಚು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

ವೈದ್ಯ ಡಾ. ಟಿ.ಎಂ. ರವೀಂದ್ರಕುಮಾರ್, ಏಕದಂತ ಎಂಟರ್‌ಪ್ರೈಸಸ್ ಮಾಲೀಕ ಹೆಚ್.ಎಸ್. ಶಿವಕುಮಾರ್, ಪೌರ ಕಾರ್ಮಿಕರಾದ ಎನ್. ರಾಜು, ಹೊನ್ನಾಳಿಯ ಹಿರಿಯ ಸಾಹಿತಿ ಎಸ್.ಎನ್. ಸಂಗನಾಳ್‌ಮಠ, ಮೈಸೂರಿನ ನಟ ವಿಶಾರದ ಸಾಹಿತಿ ಎನ್.ವಿ. ರಮೇಶ್, ಮೈಸೂರಿನ ಬೇರ್ಯ ರಾಮಕುಮಾರ್ ಅವರುಗಳಿಗೆ ಕಾಯಕ ಯೋಗಿ ಬಸವಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಹಿರಿಯ ಶಿಕ್ಷಕರೂ ಆಗಿರುವ ಸಾಹಿತಿ ಶ್ರೀಮತಿ ಸಂಧ್ಯಾ ಸುರೇಶ್, ಶಿಕ್ಷಕಿ ಶ್ರೀಮತಿ ಮಾಹಿನೂರು ಖಾನಂ, ಬಾಪೂಜಿ ಆಸ್ಪತ್ರೆಯ ಹಿರಿಯ ಶುಶ್ರೂಷಕಿ ಶ್ರೀಮತಿ ರೂಪಾ ಬಸವರಾಜ್ ಮಾತೂರ್, ಪೌರ ಕಾರ್ಮಿಕರಾದ ಶ್ರೀಮತಿ ಎನ್. ಹನುಮಕ್ಕ ಅವರುಗಳಿಗೆ ಕಾಯಕಯೋಗಿ ಶರಣೆ ಪ್ರಶಸ್ತಿ ನೀಡಿ ಗೌರವ ಸಲ್ಲಿಸಲಾಯಿತು.

ಸಾಹಿತಿ ಶ್ರೀಮತಿ ಉಮಾದೇವಿ ಮತ್ತು ವಚನ ಗಾಯಕ ಸಂಗಪ್ಪ ತೋಟದ್ ಅವರ ಪ್ರಾರ್ಥನೆ ನಂತರ ವಿಶ್ವ ವೀರಶೈವ ಲಿಂಗಾಯತ ಏಕೀಕರಣ ಪರಿಷತ್ ಮಹಿಳಾ ಘಟಕದ ಅಧ್ಯಕ್ಷರೂ ಆಗಿರುವ ಪತ್ರಕರ್ತೆ ಶ್ರೀಮತಿ ಎ.ಬಿ. ರುದ್ರಮ್ಮ ಸ್ವಾಗತಿಸಿದರು. ವಿಶ್ವ ವೀರಶೈವ ಲಿಂಗಾಯತ ಏಕೀಕರಣ ಪರಿಷತ್ ಕಾರ್ಯದರ್ಶಿ ಶಿವಕುಮಾರ್ ಶೆಟ್ಟರ್ ಅವರಿಂದ ಪ್ರಾಸ್ತಾವಿಕ ಭಾಷಣ, ಸಂಘಟನಾ ಕಾರ್ಯದರ್ಶಿ ಶ್ರೀಮತಿ ಸುಜಾತ ಬೂಸ್ನೂರ್ ಅವರಿಂದ ವಂದನಾರ್ಪಣೆ, ಹಿರಿಯ ಸಾಹಿತಿ ಎನ್.ಜೆ. ಶಿವಕುಮಾರ್ ಅವರಿಂದ ಕಾರ್ಯಕ್ರಮ ನಿರೂಪಣೆ ನಡೆಯಿತು.

ಚಿತ್ರದುರ್ಗ ಜಿಲ್ಲಾ ಬಣಜಿಗ ಸಮಾಜದ ಅಧ್ಯಕ್ಷ ಬಿ.ಆರ್. ಬಸವರಾಜ್ (ಭರಮಸಾಗರ) ಮತ್ತು ಮಲೇಬೆನ್ನೂರಿನ ದರ್ಶನ್ ಟ್ರೇಡರ್ಸ್ ರೈಸ್‌ಮಿಲ್ ಮಾಲೀಕ ಹೆಚ್.ಎಸ್. ವೀರಭದ್ರಯ್ಯ ಅವರುಗಳು ಕಾರ್ಯಕ್ರಮದ ಪ್ರಾಯೋಜಕತ್ವ ವಹಿಸಿದ್ದರು.





## ರೇಣುಕಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗಲಿ: ನಟ ಸುದೀಪ್



ಬೆಂಗಳೂರು, ಜೂ.16- ಬಾಳಿ ಬದುಕಬೇಕಿದ್ದ ರೇಣು ಕಸ್ವಾಮಿ ಕೊಲೆಯಾಗಿದ್ದಾನೆ. ರೇಣುಕಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗಲಿ. ಸತ್ಯ ಹೊರತರಲು ಮಾಧ್ಯಮ ಮತ್ತು ಪೊಲೀಸರು ಪ್ರಯತ್ನಿಸುತ್ತಿದ್ದಾರೆ. ತನಿಖೆ ನಿಷ್ಪಕ್ಷಪಾತವಾಗಿ ನಡೆಯಲಿ. ಕಾನೂನಿನ ಮೇಲೆ ಜನರಿಗೆ ನಂಬಿಕೆ ಬರುವಂತೆ ಆಗಲಿ ಎಂದು ನಟ ಸುದೀಪ್ ಹೇಳಿದ್ದಾರೆ. ರೇಣುಕಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿರುವ ಸುದೀಪ್, ಚಿತ್ರರಂಗದ ಮೇಲೆ ಕಪ್ಪು ಚುಕ್ಕೆ ಬರುವುದು ನಮಗೂ ಇಷ್ಟವಿಲ್ಲ. ಹಿರಿಯರು ಕಟ್ಟಿ ಬೆಳೆಸಿದ ಚಿತ್ರರಂಗ ಯಾರೋ ಒಬ್ಬರಿಂದ ಹಾಳಾಗಬಾರದು. ಆರೋಪದಿಂದ ಮುಕ್ತವಾಗಿ ಹೊರಬಂದ ಮೇಲೆ ಬ್ಯಾನ್ ಮಾಡಿದರೆ ಪ್ರಯೋಜನವೇನು? ಬ್ಯಾನ್ ಮಾಡುವುದಕ್ಕಿಂತ ರೇಣುಕಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗಬೇಕು, ನಾನು ಯಾರ ಪರವೂ ಇಲ್ಲ, ವಿರುದ್ಧವೂ ಇಲ್ಲ. ನಾನು ನ್ಯಾಯದ ಪರ ಇದ್ದೇನೆ ಎಂದು ಹೇಳಿದ್ದಾರೆ.

## ನೀಟ್: ಮರು ಪರೀಕ್ಷೆ ಬೇಡ, ಭ್ರಷ್ಟಾಚಾರದ ತನಿಖೆ ಆಗಬೇಕು

### ಎಐಡಿಎಸ್‌ಓ ಕಾರ್ಯದರ್ಶಿ ಅಜಯ್ ಕಾಮತ್ ಆಗ್ರಹ

ದಾವಣಗೆರೆ,ಜೂ.16- ನೀಟ್ ಪರೀಕ್ಷೆಯಲ್ಲಿ ಹೆಚ್ಚುವರಿ ಅಂಕ ಪಡೆದಿದ್ದ 1563 ವಿದ್ಯಾರ್ಥಿಗಳಿಗೆ ಮರು ಪರೀಕ್ಷೆ ನಡೆಸಲು ತೆಗೆದುಕೊಂಡಿರುವ ಎನ್.ಟಿ.ಎ. ನಿರ್ಧಾರವನ್ನು ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಖಂಡಿಸಿದ್ದಾರೆ.


ಈ ಸಂಬಂಧ ಹೇಳಿಕೆ ನೀಡಿರುವ ಅವರು, ನೀಟ್ ಫಲಿತಾಂಶದ ನಂತರ, ದೊಡ್ಡ ಮಟ್ಟದಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಕೂಗು ವಿದ್ಯಾರ್ಥಿಗಳು ಹಾಗೂ ಶಿಕ್ಷಣ ತಜ್ಞರಿಂದ ಕೇಳಿ ಬಂದಿದೆ. ಭ್ರಷ್ಟಾಚಾರ ಹಾಗೂ ರ್‍ಯಾಂಕ್ ಸುರಿಮಳೆಯ ಅಗಾಧತೆಯನ್ನು ಹೆಚ್ಚುವರಿ ಅಂಕ ನೀಡುವ ಸಮಜಾಯಿಷಿಯಿಂದ ವಿವರಿಸಲು ಸಾಧ್ಯವಿಲ್ಲ. ಪಾಟ್ನಾ ಮತ್ತು ಇತರೆ ಪ್ರದೇಶಗಳಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯ ಆರೋಪಗಳು ಕೇಳಿ ಬಂದಿವೆ. ಈ ಕುರಿತು ಸರ್ಕಾರ ಅಥವಾ ಎನ್.ಟಿ.ಎ ಯು ಯಾವುದೇ ಗಂಭೀರ ತನಿಖೆ ಕೈಗೊಂಡಿಲ್ಲ ಎಂದು ಅವರು ದೂರಿದ್ದಾರೆ.

ಇದರಲ್ಲಿ ಯಾವುದೇ ಭ್ರಷ್ಟಾಚಾರವೂ ನಡೆದಿಲ್ಲವೆಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಕ್ಲೀನ್ ಚಿಟ್ ನೀಡಿದ್ದಾರೆ. ಅವರ ಹೇಳಿಕೆಯನ್ನು ನಾವು ಬಲವಾಗಿ ಖಂಡಿಸುತ್ತೇವೆ. ಸುಪ್ರೀಂಕೋರ್ಟಿನಲ್ಲಿ ಸಲ್ಲಿಸಿದ ಹಲವಾರು ಪಿಟಿಷನ್ ಗಳ ಒತ್ತಡದ ನಂತರವೇ ಎನ್.ಟಿ.ಎ ಮತ್ತು ಕೇಂದ್ರ ಸರ್ಕಾರಗಳು ಒಂದು ಸಮಿತಿಯನ್ನು ರಚಿಸಿವೆ ಎಂದಿದ್ದಾರೆ.

ಈ ಚಳುವಳಿಯಲ್ಲಿ ನಿರತರಾಗಿರುವ ಎಲ್ಲ ವಿದ್ಯಾರ್ಥಿಗಳೊಂದಿಗೆ ಎಐಡಿಎಸ್‌ಓ ನಿಲ್ಲುತ್ತದೆ. ಮತ್ತು ಕೇವಲ 1563 ವಿದ್ಯಾರ್ಥಿಗಳ ಹೆಚ್ಚುವರಿ ಅಂಕಗಳನ್ನು ರದ್ದು ಮಾಡುವುದು ಮತ್ತು ಅವರಿಗೆ ಮರು-ಪರೀಕ್ಷೆ ನಡೆಸುವ ನಿರ್ಧಾರವನ್ನು ವಿದ್ಯಾರ್ಥಿ ಸಮೂಹವು ಒಪ್ಪುವುದಿಲ್ಲ. ಭ್ರಷ್ಟಾಚಾರವು ಕೇವಲ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಅಂಕ ನೀಡಿರುವುದಕ್ಕೆ ಸೀಮಿತಗೊಂಡಿಲ್ಲ, ಇದರ ಬೇರುಗಳು ಇನ್ನೂ ಆಳವಾಗಿವೆ. ಈ ಎಲ್ಲ ಆರೋಪಗಳ ವಿರುದ್ಧ ಸಮರೋಪಾದಿಯಲ್ಲಿ ತನಿಖೆಯಾಗಬೇಕು ಅವರು ಒತ್ತಾಯಿಸಿರುವುದಾಗಿ ಜಿಲ್ಲಾ ಕಾರ್ಯದರ್ಶಿ ಸುಮನ್ ಟಿ. ಎಸ್. ತಿಳಿಸಿದ್ದಾರೆ.

## ವೃತ್ತಿ ತರಬೇತಿಗೆ ಮಹಿಳೆಯರಿಂದ ಅರ್ಜಿ

ದಾವಣಗೆರೆ,ಜೂ.16- ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ (ತೋಳಹುಣಸೆ) ವತಿಯಿಂದ ಗ್ರಾಮೀಣ ಮಹಿಳೆಯರಿಗೆ ಹೊಲಿಗೆ ತರಬೇತಿ, ವಸ್ತ್ರ ಚೈತ್ರ ಕಲಾ ಉದ್ಯಮ, ಬ್ಯೂಟಿ ಪಾರ್ಲರ್, ಮ್ಯಾನೇಜ್‌ಮೆಂಟ್ ತರಬೇತಿ ನೀಡಲಾಗುವುದು. ವಿವರಕ್ಕೆ ಸಂಪರ್ಕಿಸಿ: 7019980484, 9483386143, 9964111314, 9538395817, 9481977076.



















KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas